★

"ಧರ್ಮ" — "ದಾಸಿ"

★

ಲೇಖಕ ಮತ್ತು ಪ್ರಕಾಶಕ:
ಚೊಕ್ಕಾಡಿ ಯಂ. ಸೀತಾರಾಮಯ್ಯ,
ಜೆಳ್ಳಾರೆ, ದ. ಕ.

★

ಬೆಲೆ: ಒಂದು ರೂಪಾಯಿ.

ವಿ. ಪ್ರ. ೪

ಶ್ರೀ. [illegible]
[illegible]
[illegible]
[illegible]
[illegible]
[illegible]

"ಧರ್ಮ"—"ದಾಸಿ"

❋

(ನಾಟಕ)

ಲೇಖಕ ಮತ್ತು ಪ್ರಕಾಶಕ:
ಚೊಕ್ಕಾಡಿ ಯಂ. ಸೀತಾರಾಮಯ್ಯ,
ಬೆಳ್ಳಾರೆ, ದ. ಕ.

1955

—* 'ಧರ್ಮ'—'ದಾಸಿ' *—

ಪಾತ್ರಗಳು

1. **ಯಯಾತಿ:**—ಮಹಾರಾಜ. ಚಂದ್ರವಂಶದ ನಹುಶನ ಮಗ
2. **ವೃಷಪರ್ವ:**—ರಾಕ್ಷಸರ ರಾಜ.
3. **ಶರ್ಮಿಷ್ಠೆ:**—ವೃಷಪರ್ವನ ಮಗಳು.
4. **ದೇವಯಾನೆ:**—ರಾಕ್ಷಸರ ಗುರುವಾದ ಶುಕ್ರಚಾರ್ಯನ ಮಗಳು.
5. **ಪೂರು:**—ಶರ್ಮಿಷ್ಠೆಯಲ್ಲಿ ಯಯಾತಿಯ ಮಗ

ಒಟ್ಟು ಪಾತ್ರಗಳು 5. ದೃಶ್ಯಗಳು 6.

ವಿಜ್ಞಾಪನೆ

ಈ ನಾಟಕಕ್ಕೆ ಮೂಲಕಥೆಯನ್ನು ಮಹಾಭಾರತದಿಂದ ಆರಿಸಿಕೊಂಡಿದ್ದೇನೆ. ಕಥೆಯಲ್ಲಿ 'ಸಹಜತೆ' ಹಾಗೂ 'ರಸ'ಪರಿಪೋಷಣೆಯ ದೃಷ್ಟಿಯಿಂದ ಅಲ್ಲಲ್ಲಿ ಸ್ವಲ್ಪ ವ್ಯತ್ಯಾಸಪಡಿಸಿದ್ದೇನೆ. ವ್ಯತ್ಯಾಸದಲ್ಲಿ ಕಂಡುಬರುವ ಲೋಪದೋಷಗಳೂ ಕಲ್ಪಣೆಗಳೂ ನನ್ನ ಸ್ವಂತದವುಗಳು. ದೇವಯಾನೆ ಮತ್ತು ಶರ್ಮಿಷ್ಟೆಯರಿಗೆ ದ್ವೇಷಕ್ಕೆ ಮೂಲಕಾರಣವಾಗಿ 'ಕಚ'ನನ್ನು ಒಲಿಸಿಕೊಳ್ಳಲು ದೇವಯಾನೆಯು ಪ್ರಯತ್ನಿಸಿ, ಆತನು ತಿರಸ್ಕರಿಸಲು, ಶರ್ಮಿಷ್ಟೆಯು ನಕ್ಕು ಹಾಸ್ಯಮಾಡಿದ್ದಳೆಂದು ಸೂಚಿಸಿ, ಶರ್ಮಿಷ್ಟೆಯು ದೇವಯಾನೆಯನ್ನು ಹಾಳು ಬಾವಿಗೆ ದೂಡಿದ್ದನ್ನು ಬಿಟ್ಟಿರುತ್ತೇನೆ. ಜಲಕೇಳಿಯಲ್ಲಿದ್ದಾಗ ಬೇಟೆಗಾರರ ಗದ್ದಲ ಕೇಳಿ ಎಲ್ಲರೂ ಹೊರಟು ಓಡಿ ಹೋಗುವಾಗ, ದೇವಯಾನೆಯು ಹಿಂದೆ ಬಿದ್ದಳೆಂದೂ, ಆಕೆಯ ಸೀರೆಯನ್ನು ಶರ್ಮಿಷ್ಟೆಯು ಅವಸರದಲ್ಲಿ ಉಟ್ಟುಕೊಂಡು ಹೋದುದೆಂತಲೂ ಒಂದಿಷ್ಟು ವ್ಯತ್ಯಾಸ ಮಾಡಿದ್ದೇನೆ. ಇನ್ನೊಂದು ಮುಖ್ಯ ವ್ಯತ್ಯಾಸವೆಂದರೆ ಕೊನೆಯ ದೃಶ್ಯದಲ್ಲಿ ಕಾಣುವ ದೇವಯಾನೆಯ ಪಶ್ಚಾತ್ತಾಪ ಹಾಗೂ ಶರ್ಮಿಷ್ಟೆಯ ದಾಸ್ಯ ಪರಿಹಾರ. ಅಲ್ಲದೆ ಅದೇ ಮಟ್ಟದಲ್ಲಿ ದೇವಯಾನೆ ಮತ್ತು ಶರ್ಮಿಷ್ಟೆಯರು ಜತೆಯಾಗಿ ಒಂದೇ ಕ್ರಮದಿಂದ ಯಯಾತಿಯನ್ನು ಓಲೈಸಿಕೊಂಡು ಸಂಸಾರಹೂಡುವ ಛಾಯೆ ಸಹಾ ಕಲ್ಪನೆಗೆ ಸಂಬಂಧಪಟ್ಟದ್ದಾಗಿದೆ. ಮೂಲಕಥೆಯು ಮಹಾಭಾರತಕ್ಕೆ ಸೇರಿದ್ದರೂ, ಪಾತ್ರಗಳ ವ್ಯಕ್ತಿತ್ವ ಹಾಗೂ ಭಾವನೆಗಳು ಮೂಲದಿಂದ ತುಂಬಾ ಭಿನ್ನವಾಗಿ ಕಾಣಬಹುದು. ಒಟ್ಟಿನಲ್ಲಿ 'ಧರ್ಮಸಂಕಟ'ವೇ ನಾಟಕದ ಕಥಾವಸ್ತುವನ್ನು ಪುಷ್ಟಿಗೊಳಿಸುವಂತೆ ಪ್ರಯತ್ನಿಸಿದ್ದೇನೆ. ಪ್ರಾಚೀನ ಕಾಲದಲ್ಲಿನ ಸಮಾಜ ನಿಯಮಗಳು ವ್ಯಕ್ತಿ ಜೀವನದಲ್ಲಿ ವಿಕಾಸಗೊಂಡು ಸಂಸಾರದಲ್ಲಿ ತೊಡಕು ತಂದಾಗ, ಧರ್ಮ ಸೂಕ್ಷ್ಮದ ನ್ಯಾಯದಿಂದ ಬಗೆಹರಿಸಲ್ಪಟ್ಟು, ವ್ಯತ್ಯಾಸವಾಗುತ್ತಿದ್ದವು. ಆ ಬಗೆಯ ಕ್ರಾಂತಿಗೆ ಬೇಕಾದ ಧಾರ್ಮಿಕ ಜ್ಞಾನವೂ, ವಿವೇಚನಾ ಶಕ್ತಿಯೂ, ಕಷ್ಟಸಹಿಷ್ಣುತೆಯೂ ಜತೆಯಾಗಿ, ಗಂಡು, ಹೆಣ್ಣು ಮಗು ಎಂಬ ತಾರತಮ್ಯವಿಲ್ಲದೆ

ಬಹು ಮಂದಿಯಲ್ಲಿ ಕೂಡಿಕೊಂಡಿತ್ತು. ಆದ್ದರಿಂದಲೇ ಕ್ಷತ್ರಿಯನಾದ ಯಯಾತಿಯು ಬ್ರಾಹ್ಮಣ ಕನ್ಯೆಯಾದ ದೇವಯಾನೆಯನ್ನು ವರಿಸಿದಾಗ, ಶರ್ಮಿಷ್ಟೆಯಲ್ಲಿ ಯಯಾತಿಯು ಸಂತಾನ ಪಡೆದಾಗ, (ಮತ್ಸರದಿಂದ ದೇವ ಯಾನೆಯೂ ಕ್ರೋಧದಿಂದ ಶುಕ್ರಾಚಾರ್ಯನೂ ಹೊರತಾಗಿ) ಯಯಾತಿಯು ಹಿರಿಯ ಮಗನನ್ನು ಬಿಟ್ಟು ಕೊನೆಯ ಮಗನಾದ 'ಪೂರು'ವಿಗೆ ಪಟ್ಟಕಟ್ಟಿದಾಗ, ಸಮಾಜದ ಯಾವ ವ್ಯಕ್ತಿಗಳೂ ಆಕ್ಷೇಪಿಸಿದ್ದು ಕಂಡು ಬರುವುದಿಲ್ಲ. ಆದರೂ ಸರ್ವಹಿತ ಧರ್ಮದ ಕುರಿತು ಎಲ್ಲರಿಗೂ ನಂಬಿಕೆಯಿತ್ತು. ಅಂತೆಯೇ ಗುರುಹಿರಿಯರಲ್ಲಿ ಭಕ್ತಿಯಿತ್ತು. ಒಬ್ಬಿಬ್ಬರು ತಪ್ಪಿದಾಗ ಸಮಾಜವು ಅವರ ಕುರಿತಾದ ನಿಷ್ಠುರ ನ್ಯಾಯವನ್ನು ಎತ್ತಿಕಟ್ಟುತ್ತಿತ್ತು. ಆದ್ದರಿಂದಲೇ ಯಯಾತಿಯ ಮಾತು ಕೇಳದ ನಾಲ್ಕು ಮಂದಿ ಮಕ್ಕಳನ್ನು ಸಮಾಜವು ನೀಕರಿಸಿತ್ತು. ಯಯಾತಿಯ ಆಜ್ಞೆಯಂತೆ ಅವರು ರಾಜ್ಯಭಾರಕ್ಕೆ ಅನರ್ಹರು ಎಂಬುದನ್ನು ಒಪ್ಪಿಕೊಂಡಿತ್ತು. ಇಲ್ಲವಾದರೆ ಆ ರಾಜ್ಯದಲ್ಲಿ ಬಂಡಾಯವೇಳುತ್ತಿತ್ತು. ಸಂಪ್ರದಾಯವನ್ನೇ ಹೆಚ್ಚು ನಂಬಿರ್ದ ಕಾಲವದು. ಆದರೂ ಏನೂ ಆದದ್ದು ಕಂಡು ಬರುವುದಿಲ್ಲ. ಧರ್ಮವನ್ನರಿತವರು, ಅಥವಾ ಅದರ ಮೇಲೆ ನಂಬಿಗೆಯಿದ್ದವರು, ಯಾವುದೇ ದುರ್ಬಲತೆಯಿಂದ ಕೂಡಿ ಧರ್ಮವನ್ನು ಬಿಟ್ಟು ನಡೆದಾಗ ಯಾ ತಪ್ಪು ತಿಳಿದಾಗ ಪಶ್ಚಾತ್ತಾಪ ಪಡುತ್ತಿದ್ದರು. ಆದ್ದರಿಂದಲೇ ಶರ್ಮಿಷ್ಟೆಯ ಮಗನಿಗೆ ರಾಜ್ಯವನ್ನು ಕೊಟ್ಟಾಗ ಶುಕ್ರಾಚಾರ್ಯನೂ, ದೇವಯಾನೆಯೂ ಆಕ್ಷೇಪಿಸಲಿಲ್ಲ. ಶರ್ಮಿಷ್ಟೆಯ ಮಕ್ಕಳು ಧರ್ಮ ದೃಷ್ಟಿಯಿಂದ ಸಮಾಜದಲ್ಲಿ ಮನ್ನಣೆ ಪಡೆದರು. ಅಂತೆಯೇ ಶರ್ಮಿಷ್ಟೆಯ ಕುರಿತು ದೇವಯಾನೆಯು ಪಶ್ಚಾತ್ತಾಪ ಪಟ್ಟಳು. ಶುಕ್ರಾಚಾರ್ಯನೂ ಶಾಪಕೊಟ್ಟು ಕಳೆದ ಮೇಲೆ ತಿದ್ದುಪಡಿಯನ್ನು ಸೂಚಿಸಿದನು. ಅಲ್ಲದೆ "ಮುಪ್ಪನ್ನು ವಿನಿಮಯಕ್ಕಾಗಿ ಕೊಳ್ಳುವ ಮಗನಿಗೆ ರಾಜ್ಯವನ್ನು ಕೊಡುತ್ತೇನೆ"ಂದು ಶುಕ್ರಾಚಾರ್ಯನಲ್ಲಿ ಯಯಾತಿಯು ಹೇಳಿದ್ದಾಗ ಶುಕ್ರಾಚಾರ್ಯನು ಸಮ್ಮತಿಸಿದ್ದನು. ದಾನವರ ಅರಸನಾದ ವೃಷಪರ್ವನು ತಾನು ರಾಜನಾಗಿ ತನ್ನ ಪ್ರಜೆಗಳನ್ನು ರಕ್ಷಿಸುವುದು ಧರ್ಮವೆಂದರಿತು ಮಗಳನ್ನು ದಾಸಿಯಾಗಿ ಕಳುಹಲು ಒಪ್ಪಿದ್ದನು. ಯಯಾತಿಯು ದಾಸಿಯಾಗಿ ನಂಬಿ ಬಂದ ಶರ್ಮಿಷ್ಟೆಯ ಇಷ್ಟವನ್ನು ಪೂರೈಸುವುದು ತನ್ನ ಧರ್ಮವೆಂದರಿತೇ

ಆಕೆಗೆ ಗರ್ಭದಾನವನ್ನು ಮಾಡಿದ್ದನು. ಶರ್ಮಿಷ್ಟೆಯ ದಾಸ್ಯವು ಕಳೆದ ಮೇಲೆ, ಆಕೆಯೂ ತನ್ನಂತೆಯೇ ಯಯಾತಿಯ ಪ್ರೇಮಪಾತ್ರಳೆಂದೂ ಆ ಪ್ರೇಮವು ಧರ್ಮಸಮ್ಮತವೆಂದೂ ತಿಳಿದಾಗ ದೇವಯಾನೆಯು ಜತೆಯಾಗಿ ಸಂಸಾರ ಹೂಡೋಣವೆಂದು ಆಕೆಯನ್ನು ಕರೆಯುತ್ತಾಳೆ. ಇಸ್ನು ವ್ಯಕ್ತಿ ಸಹಜವಾದ, ಈರ್ಷ್ಯೆ, ದ್ವೇಷ, ಸೇಡು, ಆಸೆ, ಭಕ್ತಿ ಎಲ್ಲವೂ ಆಯಾಯಾ ಪಾತ್ರಗಳಲ್ಲಿ ಕಥಾ ಕಲ್ಪನೆಗೆ ತಕ್ಕಂತೆ ಯಥಾಮತಿಯಾಗಿ ತುಂಬಲು ಪ್ರಯತ್ನಿಸಿದ್ದೇನೆ. ಶರ್ಮಿಷ್ಟೆಯು ತನ್ನ ಧಾರ್ಮಿಕ ಭಕ್ತಿಯಿಂದಲೂ, ತನ್ನ ತಂದೆಯ ಧಾರ್ಮಿಕ ನಿಷ್ಟೆಯಿಂದಲೂ ತುಚ್ಛವಾದ ದಾಸ್ಯ ಜೀವನವನ್ನು ಹೊಂದಿದಳು; ಧರ್ಮದ ಮೇಲಿನ ವಿಶ್ವಾಸದಿಂದಲೂ, ಅದನ್ನು ಪಾಲಿಸುವ ಶ್ರದ್ಧೆಯಿಂದಲೂ ಯಯಾತಿಯ ಪ್ರಣಯವನ್ನು ಪಡೆದು, ದಾಸಿಯಾಗಿಯೇ ತನ್ನಾಸೆಯನ್ನು ಪೂರೈಸಿಕೊಂಡಳು. ಅಂತೆಯೇ ಧರ್ಮಜ್ಞನಾದ ಮಗನನ್ನು ಪಡೆದು ಅವನ ಮೂಲಕ ತನ್ನ ದಾಸ್ಯವನ್ನು ಪರಿಹರಿಸಿಕೊಂಡು, ಎಲ್ಲ ಸುಖವನ್ನೂ ಹೊಂದಿದಳು. ಆಕೆಯನ್ನು 'ಧರ್ಮ'ವೇ ದಾಸ್ಯಕ್ಕೆ ದೂಡಿ, ಹದಗೊಳಿಸಿ, ಪಿತೃಭಕ್ತಿ ಪರಾಯಣನಾದ ಮಗನನ್ನು ಕೊಟ್ಟು, ಪುನಹ 'ಧರ್ಮ'ವೇ ಉದ್ಧಾರ ಮಾಡಿತು, ಎಂಬುದನ್ನು ಪ್ರತಿಪಾದಿಸುವ ನಾಟಕವಿದು. ಅದಕ್ಕಾಗಿ "ಧರ್ಮ"—"ದಾಸಿ" ಎಂದಿದರ ಹೆಸರು.

ಈ ಪುಸ್ತಕದ ಕರಡು ಪ್ರತಿಯನ್ನು ಮಂಗಳೂರು ಬೆಸೆಂಟ್ ಬಾಲಿಕಾ ಶಾಲೆಯ ಸಂಸ್ಕೃತ ಪಂಡಿತರಾದ ಶ್ರೀಮಾನ್ ಕೆ. ಲೋಕಯ್ಯ ಶೆಟ್ಟರು ಬಹು ಪ್ರೀತಿಯಿಂದ ತಿದ್ದಿಕೊಟ್ಟು ದೊಡ್ಡ ಉಪಕಾರ ಮಾಡಿದ್ದಾರೆ. ಉದಯ ಪ್ರಿಂಟರಿಯವರು ಪುಸ್ತಕವನ್ನು ಸುಂದರವಾಗಿ ಮುದ್ರಿಸಿ ಕೊಟ್ಟಿದ್ದಾರೆ. ಇನ್ನೂ ಅನೇಕ ಗೆಳೆಯರು ಬೇಕಾದ ಸಲಹೆಗಳನ್ನಿತ್ತು ಸಹಕರಿಸಿರುತ್ತಾರೆ. ಈ ಎಲ್ಲರಿಗೂ ನಾನು ಕೃತಜ್ಞನು.

ನಾಟಕವಿದು ಪದ್ಯಗಂಧಿ ಗದ್ಯದ ರೂಪದಲ್ಲಿ ಬರೆಯಲ್ಪಟ್ಟಿರುವುದರಿಂದ ವಾಚಕರಿಗೆ ಪ್ರಥಮ ಬಾರಿಯಲ್ಲಿ ಭಾವಗ್ರಹಣ ಮಾಡುವಾಗ ಒಂದಿಷ್ಟು ತೊಡಕಾಗಬಹುದು. ಮುಖ್ಯವಾಗಿ ಅಭಿನಯಿಸುವಲ್ಲಿ ಈ ತೊಡಕು ಹೆಚ್ಚಾಗಿ ಕಂಡುಬರಬಹುದು. ಆದರೆ ಪೂರ್ವದಾನದಿಂದ ಸರಿ

ಹೋಗಬಹುದೆಂಬ ವಿಶ್ವಾಸದಿಂದಲೇ, ಗುರುಹಿರಿಯರನ್ನು ಸ್ಮರಿಸಿ, ತೊದಲುಲಿಯನ್ನು ಹೆತ್ತವ್ವೆಯಂತೆ ಆಲಿಸಬೇಕೆಂದು ಪ್ರಾರ್ಥಿಸಿ ನಾನಿದನ್ನು ಶುದ್ಧಾಂತಃಕರಣಿಗಳ ಮುಂದಿಡುತ್ತೇನೆ.

ಇತಿ

ಶ್ರೀ ರಾಮ ಮಂದಿರ,
ತಾ. 6-8-1955.

ಸೀತಾರಾಮು.

"ಧರ್ಮ"—"ದಾಸಿ"

೧ನೇ ದೃಶ್ಯ

[ಉತ್ತರ ದೇಶದ ಕಾಡು. ದೇವಯಾನೆಯಂ ಕಂಡು ಮಾತಾಡಿ ಮರಳುವ ಯಯಾತಿ.]

ಯಯಾತಿ:—ಏನದೇನಚ್ಚರಿಯ ರೂಪಮಂ ಕಂಡೆ ನಾನಿಂದು, ಕಂಡೊಡನೆ ಕಣ್ಮನಂಗಳ ಸೆಳೆದು ನನ್ನೆದೆಯನೇ ಸೂರೆಗೊಂಡಿಹುದು. ಕನಕಮಯ ಕಾಯಕೊಪ್ಪಾಗಿ ಲತೆಯಂತೆ ಕೋಮಲತೆ ತುಂಬಿಹುದು. ಏನದಾ ಕನ್ನಿಕೆಯ ರೂಪೋ! ರೂಪಿನತಿಶಯದ ಬೆಡಗೋ!! ಹಾ! 'ದೇವಯಾನೆ' ('ಚ್ಚ ಚ್ಚ') ಏನೊಂದು ಸಾಹಸವ ಗೈದಿರ್ಪನಾ ಸೃಷ್ಟಿಕರ್ತಂ ಎಲ್ಲೆಲ್ಲಿನಾ ಚೆಲ್ವಿಕೆಯನೆಲ್ಲಮಂ ತಂದೊಟ್ಟಿ ಬೀರಿಹನು? ತನ್ನ ಪೀಠವ ತೆಗೆದು ಮೊಗಕಿಟ್ಟು, ತನ್ನುದರಭಂಗಾರದಿಂ ಮೈಯ್ಯ ಮೆತ್ತಿಟ್ಟು, ಬಡತನದಿ 'ಪರಮೇಷ್ಟಿ' 'ಮನ್ಮಥ'ನ ಬೇಡುತಿರೆ 'ಕಾಮ' ನಿತ್ತಂ ತನ್ನ ಕೇತನದ ಕಣ್ಗಳಂ ಬಿಲ್ಲ ಪುರ್ಬುಗಳನಂತೆಯೇ ಸಿಂಜನಿಯ ಮುಂಗುರುಳ ಮಾಲೆಯಂ, ಮೇಣ್ ಕುಸುಮಾಸ್ತ್ರದಂಗಾಂಗಸಂಪತ್ತಿಯಂ. ಸಾಲದಿರೆ, ಚಂದ್ರನಿಂ ಮಂದಹಾಸಂ, ಸೂರ್ಯನಿಂ ತನುಕಾಂತಿ, ಸುರೇಂದ್ರವಾಹನದಿಂದೆ ಮೆಲ್ನಡೆಯು, ಶಾರದೆಯ ಬೀಣೆಯಿಂ ಸವಿಗೊರಲು, ಸಿರಿದೇವಿಯಿಂ ಲಾವಣ್ಯಂ, ಗಿರಿಜಾತೆಯಿಂ ಪ್ರೇಮ! ಮತ್ತಂತೆಯೇ ಮೇಲು ಮೇಲೆನ್ನಿಸಿದ ಸುರಲೋಕವಾಸಿಗಳ ಚೆಲ್ವಿಕೆಯನೆಲ್ಲಮಂ, ಕಾಡಿ ಬೇಡುತ್ತೆ ಕೂಡಿಟ್ಟು ತನ್ನ ಕೈಪಾಡದಿಂ 'ಚತುರಾಸ್ಯ'ನೀ ಕನ್ನೆಯಂ ನಿರ್ಮಿಸಿದನೆ? ಏನು ಸೊಬಗಿನ ಸಿರಿಯೋ? ಮತ್ತೇನು ಸೌಂದರ್ಯದಾ ನಿಧಿಯೋ? ಕಂಡಿರ್ಪೆನೆನಿತೆನಿತೊ ನಾರಿಯರನೀ ಜಗದಿ; ಕಂಡುದಿಲ್ಲವು ನಾನಿಂದು ಕಂಡಿರ್ದೀಕೆಯಂ ಸರಿದೂಗಲಿನ್ನೊಂದು ಪೆಣ್ಣಂ. ಕವಿಕುಲವ ಕಲ್ಪನೆಗು ಬಾರದಿಹ ಕನ್ನೆ ಮಗಳಾಗಿ ತಾಂ 'ಶುಕ್ರಂ'ಗೆ ಜನ್ಮಿಸಿಹಳಂತೆ. ಮತ್ತಾವನೋಂಪಿಯಂ ನೋಂತು ಪಡೆದನೋ ದೈತ್ಯಗುರು ಪುತ್ರಿಯಂ, ಚಿತ್ತಜನೆ ಮರುಳಪ್ಪ ಮೋಹನದ ಮೂರ್ತಿಯಂ. ಹಾ! ನಾನಿತ್ತ ಉತ್ತರೀಯವನುತ್ತೆ ನೀರಿನಿಂ ಮೇಲೇರಿ ಬರುತಿರ್ದ ನೀರ

ಜಾಕ್ಷಿಯ ಸೊಬಗೆ ತೊಯ್ದು ವಸನದಿ ಚಿಮ್ಮಿ, ಕೊನರಿಸಿತು ನಾನರಿಯದಿರ್ದಾವುದೋ ನನ್ನೆದೆಯ ಭಾವಮಂ. ನಿರಾಭರಣೆಯಾಗಿರ್ದೊಡಂ, ಲಜ್ಜೆಯಿಂ ನಸುಬಾಗಿ ನಿಂದಿರ್ದ ಸರ್ವಗುಣಾಭರಣೆಯಂ ಕಂಡೊಡನೆ ಕರಣಂಗಳೊಂದಾಗಿ ಸೋಲನೊಪ್ಪಿದುವಲ್ಲಿ ಹೃದಯಮಂ ಕಳೆದುಕೊಟ್ಟು. ಕಾರ್ಮುಗಿಲ ಕೇಶಾಳಿಯಿಂ ಜಲ ಬಿಂದುಗಳ್ ತೊಟ್ಟಿಕ್ಕುತಿರೆ, ತನ್ನೆರಡು ಕೈಯ್ಗಳಂ ಮೇಲೆತ್ತಿ, ಕಬರಿಯಂ ಕೊಡಹಿ, ನೀರಹಾರಿಸಿದ ಚಂದಮೇ! ಎರಳೆಗಂಗಳ ದಿಟ್ಟಿಯಂ ಬೀರಿ, ಕಡೆಗಣ್ಣ ಬಾಣದಿಂ ಮನವನಿರಿದಿರಿದು, ನಸುನಕ್ಕು ಕಾಲ್ತುದಿಯ ಬೆರಳಿಂದೆ ನೆಲನ ಗೀರುವ ನಾಣಿನಿಂ, ಬಾಲೆ ತಾಂ ಬಾಗುತೊಯ್ಯಾರದಿಂ ನುಡಿದಳಿದೊ ತಡೆತಡೆದು "ಮಾನಮಂ ರಕ್ಷಿಸಿದೆ ಸ್ವಾಮಿಯೇ ಕೊಳ್ಳೆನ್ನ ಸರ್ವಸ್ವ"ಮೆಂದು. ಸ್ವರ್ಗೀಯ ಸೌಂದರ್ಯಮಂ ಮನದಣಿಯೆ ನೋಡುತ್ತೆ ಮೊದಲೆ ಮೈಮರೆದು, ಮಂಕನೋಲ್ ಪೆಚ್ಚಾಗಿ ನಾನಿರ್ದೆ. ಮಧುರಮಯ ಮದನರಸಮದಿರೆಯಂ ನನ್ನೆದೆಗೆ ಸುರಿಸುರಿದು, ನುಡಿದಿರ್ದ ಸವಿನುಡಿಯ ನುಡಿ ಕೇಳಿ, ಹುದುಗಿರ್ದ ಭಾವಮೇ ಹುಚ್ಚೆದ್ದು ನರ್ತಿಸಿತು. ಧೀರತೆಯ ಕಲಿತನಂ, ಸಿಕ್ಕಿ ಶರಣಾಯ್ತು ಪೆಣ್ತನದ ಸಿಂಗರದ ಮುಂದೆ. ರೂಪ ರೂಪವನರ್ತಿಯಿಂದೊಪ್ಪಿ ಸೋತಿತ್ತು, ಮೆಚ್ಚುತೊಲಿದಿರ್ದ ಮನಗಳೊಂದಾಗಿ ಕೂಡಿದುವು, ತಾವರೆಯ ಕೊಳಮಿತ್ತು, ಚೆಂದಳಿರು, ತಂಗಾಳಿ, ಮರಿದುಂಬಿ, ಜತೆಯಾಗಿ ಪರಿಕಲಿಸಿ ಮೆರೆದಿತ್ತು. ಕಾಲಮೋ ಕಾಣಿಸದ ಕೈಯ್ಯಿಂದೆ ಬೆನ್ನ ಚಪ್ಪರಿಸಿ ಹುರುಪನೀಯುತಲಿತ್ತು. ಕಳ್ವೇಟಕಿನಿತೆಲ್ಲಮೊಂದಾಗಿ ಸಂಚುಗಳ ಹೂಡಿರ್ದೊಡಂ, ಗಾಂಧರ್ವ ವಿಧಿಯಿಂದ ಕೈವಿಡಿದು ಪ್ರಣಯಪ್ರಪಂಚಮಂ ಸೇರ್ದಪುದು ಸಾಧ್ಯಮಾಗಿರ್ದೊಡಂ, ಧರ್ಮಭೀತಿಯೆ ತಡೆದಿರ್ದುದೆಮ್ಮಂ. ವಿಪ್ರವಧುವಾಕೆ, ಕ್ಷಾತ್ರೇಯನಾಂ, ಪಿತನನೊಪ್ಪಿಸಿ ಮಾಲೆಯನ್ನಿಕ್ಕುವೆಂ ತಾನೆಂದು ನುಡಿದಿಹಳು. ಬಿಡಲಾರದೆನ್ನಂ ಪಿಂತಿರುಗಿ ನೋಡನೋಡುತೆ ಮುಂದೆ ಮದುವೆಯೊಳ್ ಸೆರಗ ಪಿಡಿದಪೆನೆಂದು ನುಡಿದವಳೆ ಬಿಟ್ಟೆನ್ನ ನಡೆದಿಹಳು. ವರ್ಣೋತ್ತಮೆಯು ಕನಿಷ್ಠನಂ ಕೈವಿಡಿಯೆ "ಧರ್ಮ"ಮಿರ್ದಪುದೆ? ಗುರುವಿನೊಪ್ಪಿಗೆಯಹುದೆ? ಮುಂದೆ ನಮ್ಮೀರ್ವರಾ ಪರಿಣಯಂ ನಡೆದಪುದೆ? ಹಾ! ದೇವಯಾನೆ!! ನಿನ್ನವನೆ ನಾಂ, ಮರೆಯದಿರು ಮುಂದೆ ಎಂದೆಂದಿಗೂ ನಿನ್ನವನೆ ನಾಂ, ನನ್ನೆದೆಯ ಆನಂದಸಾಮ್ರಾಜ್ಯಕಧಿಕಾರಿಣಿಯು ನೀಂ,

ವಿಸ್ತಾರವಾದೆನ್ನ ಸಾಮ್ರಾಜ್ಯದಾ ಮಹಾರಾಣಿ ನೀಂ. ಬಾ ಎನ್ನ ಚೆನ್ನೆ! ಬಾ! ಬಂದೆನ್ನ ಬಾಳ ಬೆಳಗಿಸಿ ಭಾಗ್ಯಮಂ ನೀಡೆನಗೆ. ಬಾ! ಬಾಲೇಂದು ಫಾಲೆ! ಬಲು ಬೇಗ ಬಾ.

[ಹೋಗುವನು] (ಪಂದೆ ಬೀಳುವುದು.)

೨ನೇ ದೃಶ್ಯ

[ಶರ್ಮಿಷ್ಠೆಯು ಒಬ್ಬಳೇ ಕುಳಿತು ಅಂತಃಪುರದಲ್ಲಿ ಯೋಚಿಸುತ್ತಿರುವಳು.]

ಶರ್ಮಿಷ್ಠೆ:—ಪೆಣ್ಣಾಗಿ ಜನಿಸಿರ್ದೊಡಂ ಗುರುಸುತೆಯು ಪೆಣ್ತನಕೆ ಸಲ್ಲದಾಗರ್ವದಿಂ ಬೀಗಿಹಳು; ಲೋಕ ಮೋಹಕ ರೂಪಮಂ ಪಡೆದಿರ್ಪೆ ತಾನೆಂದು, ಬಾಲ್ಯದಿಂ ಜತೆಯಾಗಿ ಬೆಳೆದಿರ್ದ ಕೆಳದಿಯರ ತಂಡಮಂ ದಿನ ದಿನಕೆ ಕಡೆಗಣಿಸಿ ಕಂಡಪಳು. ತನ್ನಂ ಪಡೆದ ಪಿತ ತಾನೆ ದೈತ್ಯ ಕುಲಕೆಲ್ಲ ಗುರುವಾಗಿ ನಿಂದಿರಲ್, ತಾನವನ ಮಗಳಾಗಿ ಬಾಲೆಯರನೆಲ್ಲರಂ ತನ್ನಂಕೆ ಯೊಳ್ ತಂದಪೆಂ ತಾನೆಂದು, ಛಲವನಡಿಗಡಿಗೆ ಬೀರುತ್ತೆ ದರ್ಪದಿಂ ನಡೆಯುತಿಹಳು. ಜನ್ಮನದ ಒಡನೊಡನೆ ಬಳೆದು ಬರ್ಪಾಕೆಯಾ ಸೊಕ್ಕನರಿತಿರ್ದೊಡಂ, ಗುರುಶಾಪಭೀತಿಯಿಂ ಪಿರಿಯರೆಲ್ಲಂ ಮಾತೆತ್ತ ದೆಯೆ ಮೌನಮಂ ತಳೆದಿಹರು. ನಮ್ಮವರ ದೂರನೇ ಕೇಳದಿಹರು. ನಮ್ಮೆಲ್ಲರಂ ತಿದ್ದಿ ಬುದ್ಧಿಗಲಿಸುವ ಪೂಜ್ಯ ಗುರುವರಂ, ತನ್ನ ಮಗಳಂ ಎಲ್ಲಿಲ್ಲದಾ ಸಲುಗೆಯಿಂ ಬಳೆಯಿಸುತೆ ಬಂದಿಹನು. ಅಲ್ಲದಿರೆ ಗೀಷ್ಪತಿಯ ಮಗನನೆಮ್ಮವರ್ ತರಿತರಿದು ಕೊಂದಿರ್ದೊಡಂ, ಮಗಳ ಛಲಕಾಗಿ ಮತ್ತವನ ಪುಮ್ಮೆಯುಂ ನಮ್ಮ ಗುರು ಬದುಕಿಪನೆ? ಇನ್ನೆನಿತು ದಿನವೀ ದೇವಯಾನೆಯ ನೋಲೈಸಿ ಜೀವಿಪುದು. ನಮಗವಳ ತಳ್ಳಿಯೇ ಬೇಡೆಂದು ಕುಳ್ಳಿರ್ದೊಡಂ, ತಾನಾಗಿ ಬಂದೆಮ್ಮ ಕೇಳಿಯೊಳ್ ಕೂಡುವಳು. ಮತ್ತಲ್ಲಿಯೇ ಅಲ್ಲಸಲ್ಲದ ನೆಪವ ತಂದೊಡ್ಡಿ ನಮ್ಮೆಲ್ಲರಂ ನೀಕರಿಸಿ ದರ್ಪಮನೆ ಬೀರುತಿಹಳು. ಕನ್ನೆಯರ್ ನಾವೆಮ್ಮ ವಿಧ ವಿಧದ ಗೋಷ್ಠಿಯೊಳ್ ನಮ್ಮೊಡನೆ 'ಬಾ'ಯೆಂದು ನಾವಾಕೆಯಂ ಕರೆದೆವಾದರೆ, ಕರೆದುದೇ ತಪ್ಪು; ಕರೆಯದಿರ್ದೊಡೆ ಕರೆಯದಿರ್ದುದೆ ತಪ್ಪು. ದಾನ ವೇಂದ್ರನ ಪುತ್ರಿ ನಾಂ, ನಾನೆನ್ನ ಜನಕನೊಳ್ ಘಟನೆಯೊಂದೊಂದರಂ ವಿವರಿಸುತೆ ಬಂದಿರ್ದ ಸಂಕಟವನೊರೆಯುತಿರೆ "ಮಗಳೆ! ಶುಕ್ರನಿರ್ದರೆ

ನಾವುಂಟು, ನಮ್ಮ ಕುಲಮುಂಟು, ಮತ್ತೆಮ್ಮ ಸಾಮ್ರಾಜ್ಯ ಸಂಪದಮೆಲ್ಲ ಮುಂಟು. ನುಡಿಯದಿರ್ ಸಹಿಸಿಕೋ ನೀನೆ"ಂದು ನನ್ನನೇ ಸಂತೈಸಿ, "ಸ್ವೈರಣೆಯನಿತ್ತೆಮ್ಮ ರಕ್ಷಿಪುದು ನೀನೆ"ಂದು ಶಿವನನರ್ತಿಯಿಂ ಬೇಡುತಿಹನು. ಹಾಯ್! ಇನ್ನೆನಿತು ದಿನವೀ ದುಃಸ್ಥಿತಿಯೋ? ಮುಂದೇನು ಗತಿಯೋ? ಶಂಕರಾ!

[ರಕ್ಕಸ ರಾಜನಾದ ವೃಷಪರ್ವನು ದುಃಖದಿಂದ ಯೋಚಿಸುತ್ತಾ ಬರುತ್ತಾನೆ.]

ವೃಷಪರ್ವ:–(ಸ್ವಗತ) ಹಾಯ್ ದೈವವೇ! ನನ್ನುದರ ಸಂಭವೆಯ ಬಲಿಯಿತ್ತು ನನ್ನವರ ನಾಂ ಬದುಕಿಪುದು ಧರ್ಮವಾಗಿರ್ದೊಡಂ, ನನ್ನ ಪ್ರಾರಬ್ಧದಾ ಕರ್ಮಮಿದು ಸತ್ಯ. ದೈತ್ಯಕುಲಧರಣೀಧವಂ ನಾನಾಗಿ ನನ್ನ ಭಾಗ್ಯಕೆ ನಾಂ ಪಡೆದ ಹಸುಗೂಸನೀ ಶರ್ಮಿಷ್ಠೆಯಂ ತೊತ್ತಾಗಿ ಕಳುಹುತ್ತೆ ಘೋರತರ ರೌರವಕೆ ದೂಡಲೇ? ಅದಕಾಗಿಯೇ ಮಗಳ ನಾಂ ಪಡೆದೆನೆ? ಅಯ್ಯೋ! ಮಗಳವಳು ನನ್ನವಳು, ಮುದ್ದಿನಾ ನನ್ನೆಳೆಯ ಕರುಳು. ಹುಟ್ಟಿದಾ ದಿನದಿಂದೆ ಬಹು ಪ್ರೀತಿಯಿಂ ಸಲಹುತ್ತೆ ಬಂದಿಂದು ಕೈಯ್ಯಾರೆ ನಾನವಳ ಬಾಳ್ವೆಯಂ ಕೊಲೆಗೈಯ್ಯಲಾಯ್ತೆ. ನನ್ನ ವಿಧಿಯೇ ಹಾಯ್! ಶಂಭೋ!!

ಶರ್ಮಿಷ್ಠೆ:—[ಪಿತನ ಬರವನ್ನರಿತು ಜಗ್ಗನೇ ಮೇಲೆದ್ದು] ಅಪ್ಪಾ! ಅದೇನು ವದನದೊಳ್ ಕಾರ್ಮುಗಿಲ ಛಾಯೆ? ಮನವನಾವುದೋ ದುಃಖ ಬಾಧಿಸಿದ ತೆರದಿಂದೆ ತೋರುತಿದೆ, ಏನಾದುದಪ್ಪಯ್ಯಾ!

ವೃಷಪರ್ವ:—[ದುಃಖ ಭಾರದಿಂದ ನಿಟ್ಟುಸಿರನ್ನೆಳೆಯುತ್ತಾ ಕುಳಿತು] ಹುಂ!

ಶರ್ಮಿಷ್ಠೆ:—ಪೇಳೆನಗೆ ತಾತ! ಮತ್ತಾವ ಶೋಕದಿಂದುಮ್ಮಳಿಪೆ? ಮೌನಮಂ ಬಿಟ್ಟು ಕಳೆ, ಮಾತಾಡು ಜನಕ, ಪ್ರಕೃತಿಯೊಳ್ ಹಗಲು ರಾತ್ರಿಗಳಿರ್ಪುದದು ಸತ್ಯ, ಅಂತೆಯೇ ಸುಖ ದುಃಖಗಳ್ ಜೀವರಿಗೆ ನಿತ್ಯ.

ವೃಷಪರ್ವ:—ಹಾಯ್, ಹಾಯ್, ಮಗಳೇ! (ಕಣ್ಣೀರು ಸುರಿಸುವನು.)

ಶರ್ಮಿಷ್ಠೆ:—(ತಂದೆಯ ಕಾಲನ್ನೊತ್ತುತ್ತಾ) ಅಪ್ಪಾ! ದುಗುಡ ಮೇಕಿಂತು ಹೇಳು. ಮತ್ತಾವ ಪರಿಭವಕೆ ತುತ್ತಾದುದೆಮ್ಮರವು, ಹೇಳೆನೆಗೆ, ಹೇಳು ಯಾರಿಂದೆ, ಎಲ್ಲಿ, ಏನಾದುದೆಂದೆಲ್ಲಮಂ ನುಡಿಯೆನಗೆ ತಾತಾ!

ವೃಷಪರ್ವ:—ಪರಮ ಪಾಪಿಯು ನಾಂ, ಮಗಳೇ? ಸರ್ವನಾಶದ ಹೊತ್ತು ಸವನಿಸಿತು.

ಶರ್ಮಿಷ್ಠೆ:—ಅದೇನು?

ವೃಷಪರ್ವ:— ರಕ್ಕಸರ ಬಲವೆಲ್ಲ ಕುಗ್ಗುವುದು ಮತ್ತೆ ನಾವೆಂತು ಬದುಕುವುದು?

ಶರ್ಮಿಷ್ಠೆ:—ಏತರಿಂದ ಜನಕ, ಏನಾಯ್ತು?

ವೃಷಪರ್ವ:—ಬಹುಕಾಲದಿಂ ದನುಜಕುಲಮೆಲ್ಲ ಸ್ವರ್ಗ ಸುಖ ಭಾಗ್ಯಮಂ ಪಡೆದಿಲ್ಲಿ ಬಾಳ್ವೆಯಂ ಸಾಗಿಪುದು; ನಿನ್ನಂ ಪಡೆನಾತನಾಳ್ವಿಕೆಯ ಕಾರಣದ ಮಾತ್ರದಿಂದಲ್ಲ ಮಗಳೇ, ನಾವೆ ಕಟ್ಟಿದ ನಮ್ಮ ರಾಷ್ಟ್ರದಭಿ ವೃದ್ಧಿಯಂ ಕೋರಿ, ನಮ್ಮ ಜನಮನದ ಸಂತಸಕೆ ಸಂಪದವ ತುಂಬಿಸಲ್ ದಾಯಾದ್ಯರಾ ದಿವೌಕಸರ ಸೊರ್ಕಂ ಮುರಿಮುರಿದು ಮತ್ತವರ ದೇಶ ದೈಸಿರಿಯ ಸೂರೆಯಂ ಗೈದಿಲ್ಲಿ ತಂದೊಟ್ಟಿ ಮೆರೆದಿರ್ದ ಸಾಹಸಕೆ, ನಮ್ಮ ಕಟ್ಬಾಳುಗಳ ಭುಜ ಶಕ್ತಿಯೊಂದೆ ಕಾರಣಮಲ್ಲ ಕಂದ. 'ಹರ ವಿರಿಂಚಿ'ಗಳ ತಪದಿ ಮೆಚ್ಚಿಸುತೆ ಪಡೆದಿರ್ದ 'ವರ'ದ ಬಲದಿಂದೆ ದಿನ ದಿನಂ ನಾವಾರ ಕೃಪೆಯ ವಜ್ರ ಪಂಜರದಿ ರಕ್ಷಣೆಯಗೊಂಡಿಲ್ಲಿ ಬದುಕಿರ್ಪೆವೊ, ಮತ್ತಾರ ಮಹಿಮೆಯೊಳ್ ಸತ್ತೊಡಂ ಮತ್ತೊಡನೆಯೇ ಬದುಕಿ ಬಂದಪೆವೊ, ಆ ನಮ್ಮ ಪೂಜ್ಯ ಗುರುವರನ ಮಂತ್ರಶಕ್ತಿಯ ಬಲಮೆ ನಮ್ಮೆಲ್ಲರೇಳಿಗೆಯ ಕಾರಣಕೆ ಜೀವಾತುವಾಗಿಹುದು.

ಶರ್ಮಿಷ್ಠೆ:— ಅಪ್ಪಾ! ಪೂರ್ಣ ಜಲ ಪರಿಪೂರ್ಣವಾಗಿತ್ತ ಹರಿಯು ತಿಹ ನಮ್ಮ ಕೀರ್ತಿ ಕಾಲುವೆಗೆ ಜಲವನಾವಗಂ ಪೂರೈಪ ಸರಸಿಯಂತೆಮ್ಮ ಗುರುದೇವನಂದಡಿಗಡಿಗೆ ನೀಂ ಜನರ ಬೋಧಿಸಿದ ನುಡಿಗಳಂ ಕೇಳಿರ್ಪೆ ನಾಂ, ಮಹಿಮಾನ್ವಿತಂ, ಶುಕ್ರ ಮುನಿಪುಂಗವಂ ನಮ್ಮವರ ಬೆನ್ನ ಮೂಳೆ ಯೊಳಿರ್ದು ಸಲಹುತಿರೆ ಮತ್ತಾವ ದುಃಖ ಸವನಿಸಿತು ತಾತ!

ವೃಷಪರ್ವ:—ಮಗಳೇ!........ದೇವಯಾನೆಯಂ ಕೂಡುತ್ತೆ ನಿನ್ನೆ ನೀವೆಲ್ಲ ಕೆಳದಿಯರ್ ಜತೆಯಾಗಿ ಜಲ ಕೇಳಿ ಗೈದಿರ್ದಿರೇಂ?

ಶರ್ಮಿಷ್ಠೆ:—ಅಹುದು ತಾತ!

ವೃಷಪರ್ವ:—ಮರಳುತಿರೆ ....ನೀವೆಲ್ಲರಾಕೆಯಂ ಬಿಟ್ಟು ಬಂದಿರ್ದಿರೇಂ?

ಶರ್ಮಿಷ್ಠೆ:—(ತುಸು ಗಾಬರಿಯಿಂದ) ಹಾ!

ವೃಷಪರ್ವ:—ಗುರುಸುತೆಯ ಸೀರೆಯಂ ನೀನುಟ್ಟು ಬಂದೆ ಗಡ ದಿಟವೇನು?

ಶರ್ಮಿಷ್ಠೆ:—ಅಪ್ಪಾ! ಬುದ್ಧಿಪೂರ್ವಕವಾಗಿ ನಾನೇನನುಂಗೈದಿಲ್ಲ. ನಾವೆಲ್ಲರೊಂದಾಗಿ ನೀರಾಟವಾಡುತಿರೆ ಬೇಂಟೆಗಾರರ ಗಲ್ಲು ಕೇಳಿಸಿತು. ಗಲಿಬಿಲಿಯೊಳೆಲ್ಲರುಂ ಸರಸಿಯಿಂ ಮೇಲೆದ್ದು ಕೈಗೆ ಸಿಕ್ಕಿದ ಬಟ್ಟೆಯಂ ಧರಿಸುತ್ತೆ ಮತ್ತಲ್ಲಿ ನಿಲ್ಲದೆಯೆ, ಪಿಂತಿರುಗಿ ಸಹ ನೋಡದೆಯೆ ನಾವೆಲ್ಲ ಪಾಯ್ದೋಡಿ ಬಂದಿಹೆವು. ಅವಸರದೊಳಾಂಧರಿಸಿರ್ದ ಸೀರೆಯೇ ದೇವಯಾನೆಯ ಸೀರೆಯಾಗಿತ್ತು. ನಾನರಿತು ಉಟ್ಟು ಬಂದಿಹುದಲ್ಲ ಜನಕ. ಅರಮನೆಗೆ ಬಂದ ಮೇಲರಿವಾಯ್ತು. ಗುರುಸುತೆಯು ನಮ್ಮೊಡನೆಯೇ ಮರಳಿ ಬಂದಾಕೆ ಮನೆಯ ಸೇರಿರ್ಪಳೆಂದೆಣಿಸಿ............

ವೃಷಪರ್ವ:–(ತುಟಿಜಗಿದು) ಆಕೆಯಿನ್ನೂ ಮನೆಗೆ ಬಂದಿಲ್ಲ. ಅದೇ ನಮ್ಮ ಸರ್ವನಾಶಕೆ ಮೂಲ.

ಶರ್ಮಿಷ್ಠೆ:—ಅದೇನು ಜನಕ, ಆಕೆಗೇನಾಯ್ತು?

ವೃಷಪರ್ವ:—ನೀವೆಲ್ಲರೊಂದಾಗಿ, ಅದರೊಳೂ ನೀನೆ ಮೊದಲಿಗಳಾಗಿ ದೇವಯಾನೆಯ ಮಾನಮಂ ಕಳೆವ ಸಂಚುಗಳ ಹೂಡುತ್ತೆ, ಅವಳುಡುವ ಬಟ್ಟೆಯಂ ಕೊಂಡು, ಅವಳನಲ್ಲಿಯೆ ಬಿಟ್ಟು ದ್ರೋಹಮಂಗೈದುದಂತೆ.

ಶರ್ಮಿಷ್ಠೆ:—ಅಪ್ಪಾ! ನಾವೆಲ್ಲ ದೇವಯಾನೆಗೆ ದ್ರೋಹಮಂ ಬಗೆದೆವೆ? ಅಯ್ಯೋ! ಗುರುಸುತೆಯ ಮಾತಿರಲಿ, ಬೇರಾವ ಬಾಲೆಯಾಗಿರ್ದೊಡೇಂ? ನಾವವಳ ಮಾನಮಂ ಕಳೆವ ಕಾರ್ಯದೊಳ್ ಕೈಯ್ಯಿಕ್ಕುವ ಕುತ್ಸಿತರೆ? ಜನಕ· ಮಾನಧನನೀಂ. ನಿನ್ನಣುಗಿ ನಾಂ, ನಾನಿರ್ದು ಹೆಂಗುಸೋರ್ವಳ ಮಾನಮಂ ಕಾಯ್ವುದಲ್ಲದೆ, ಕಳೆಯಲೆಡೆಯುನಾದರು ಕೊಟ್ಟಪೆನೆ? ಛಿ!

ವೃಷಪರ್ವ:—ನಿನ್ನ ನುಡಿ ನಿಜವಿರ್ದರೇನಂತೆ, ಇಂತು ಬಂದಿದೆ ದೂರು.

ಶರ್ಮಿಷ್ಠೆ:—ತಿಳಿದು ನಾವ್ ಮತ್ತಾವ ತಪ್ಪನೂ ಗೈದಿಲ್ಲ ತಾತ.

ವೃಷಪರ್ವ:—ವತ್ಸೆ! ಬೇಕೆಂದು ನೀನಾವ ತಪ್ಪನೂ ಮಾಡಿಲ್ಲ. ಬಲ್ಲೆನಾಂ ಅಪರಾಧೀಂ? ಪಾರಬ್ಧಮೆಮ್ಮ ಬೆನ್ನ ಹಿಂದೆಯೆ ಬಂದು ಬಾಧಿಸಿತು. ಶುಕ್ರಸುತೆಯುಂ ಮೊದಲಿನಿಂದಲೆ ಬಲ್ಲೆನೀಂ ಸಿಡುಕಿನಾ ಹೆಣ್ಣವಳು. ನೀನೆ ದ್ರೋಹಮಂ ಗೈದಿರ್ಪೆ ಎಂದದರ ಸೇಡಂ ತೀರಿಸಲ್ ಛಲವ ಹಿಡಿಯುತ್ತೆ, ಪುರಕಿತ್ತ ಬಾರೆನೆಂದಯ್ಯನೊಳ್ ಹಟವ ಹೂಡಿಹಳು. ಮಗಳ ಮೇಲಿನ ಮೋಹದಿಂ ಗುರುದೇವನುಂ ಸಿಟ್ಟಾಗಿ ಮತ್ತೇನೇನೊ ನುಡಿಯುತಿಹನು.

ಶರ್ಮಿಷ್ಠೆ:—ಶಾಪಮಂ ಕೊಟ್ಟನೆ?

ವೃಷಪರ್ವ:—ಇಲ್ಲ ಮಗಳೆ, ಶಾಪಮಂ ಕೊಡಲಿಲ್ಲ, ಶಾಪಕಿಂತಲು ಕಠಿಣತರ ತಾಪದಾ ಮಾತನುಡಿದಿಹನು. ಅದಕಾಗಿ ಕೊರಗುತಿಹೆನಾಂ.

ಶರ್ಮಿಷ್ಠೆ:—ಏನ ನುಡಿದನು ಜನಕ?

ವೃಷಪರ್ವ:—ನಮ್ಮೆಲ್ಲರಂ ತೊರೆದು ಶುಕ್ರಮುನಿ ಪುಂಗವಂ, ದನುಜಕುಲ ಗುರುವರಿಷ್ಟಂ, ಮಗಳನೊಳಗೊಂಡು ದೇಶಾಂತರಕೆ ನಡೆದಪನಂತೆ. ತನಗಿನ್ನು ನಮ್ಮವರ ಕ್ಷೇಮ ಚಿಂತನೆಯ ಭಾರಮೇ ಬೇಡೆಂದು ನುಡಿದಿಹನು. ಮತ್ತಂತೆಯೇ ಪೊರಡಲಣಿಯಾಗಿ ನಿಂದಿಹನು.

ಶರ್ಮಿಷ್ಠೆ:—ಹಾಯ್! ತಾತ, ನಾನರಿತು ಮತ್ತಾವ ದ್ರೋಹಮಂ ಬಗೆದಿಲ್ಲದಿರ್ದೊಡಂ, ಸತ್ಯಮಂ ಶೋಧಿಸದೆ ತಪ್ಪನೆಲ್ಲವನೆನ್ನ ಮೇಲೆಯೆ ಹೊರಿಸಿ ಹೊರಟಪನೆ ಗುರುದೇವ........ಮೊದಲಿನಿಂ ದೇವಯಾನೆಗೆ ನನ್ನ ಮೇಲೆಯೆ ಸಿಟ್ಟು. ಮತ್ತೀಗಲೀ ನೆವನಮಂ ಮುಂದಿಟ್ಟು ನನ್ನಂ ಮರ್ದಿಸಲು ತೊಡಗಿಹಳು. ಮಗಳ ಮಾತನೆ ನಂಬಿ ದೇವಯಾನೆಯ ಪಿತಂ ಹೊಣೆಯನೆಲ್ಲವನೆನ್ನ ಮೇಲ್ ಹೇರುತ್ತೆ, ನಮ್ಮೆಲ್ಲರಂಬಿಟ್ಟು ನಡೆದಪಂ. ಅಯ್ಯೋ! ಜನಕ! ನಾನಾವ ತಪ್ಪನುಂ ಗೈಯ್ಯದಿರ್ದೊಡದೇನು? ನಮ್ಮ ಗುರುದೇವನಾ ಮುನಿಸಿಂಗೆ ಕಾರಣಳಾದೆನಲ್ತೆ. ನಾನಾತನಂ ಕಾಲ್ಪಿಡಿದು ಇಲ್ಲದಾ ತಪ್ಪನೊಪ್ಪುತ್ತೆ ಬೇಕಾದ ಶಿಕ್ಷೆಯಂ ವಿಧಿಸೆಂದು ಬೇಡುವೆಂ. ವಿಧಿಸಿದಾ ಶಿಕ್ಷೆಯನೆ ನೀಂ ನೀಡೆನಗೆ. ಅಂತಾದೊಡಂ ನಿಲ್ಲಲಾರನೆ ಗುರುವರಂ?

ವೃಷಪರ್ವ:—ಕುಮಾರಿ! ನಾನೆ ಕಾಲ್ವಿಡಿದು ಕೇಳಿದರು ಸಾಧ್ಯ ವಾಗದೆ ಹೋಯ್ತು. ಮಾತುಮಾತಿಗೆ ಪೇಳ್ವನೊಂದೇ ಮಾತ. ನೀಂ ಗೈದಕೃತ್ಯದಿಂ ಗುರುಸುತೆಯು ಪೂರ್ಣನೊಂದಿಹಳಂತೆ. ನೊಂದವಳ್ ನುಡಿದಿರ್ದ ನುಡಿಯೊಂದ ನಡೆಸಿದೊಡೆ ಮಾತ್ರ ನಮ್ಮೆಲ್ಲರಂ ರಕ್ಷಿಸುತೆ ಠಾನಿಲ್ಲಿ ನಿಲ್ವನಂತೆ.

ಶರ್ಮಿಷ್ಠೆ:—ಅಪ್ಪಾ! ದೇವಯಾನೆಯು ನುಡಿದು ಗುರುದೇವ ನೊರೆದಿರ್ದ ನುಡಿಯೊಳೇನಿಹುದೊ ಕೇಳಿದಪೆ ನಾಂ.

ವೃಷಪರ್ವ:—ಬೇಡ ಮಗು, ನನ್ನೆರ್ದೆ ದಹಿಸುತ್ತೆ ಬರುತಲಿದೆ. ಕೇಳಲಾರದ ಮಾತು. ಮತ್ತದಂ ನಿನ್ನ ಮುಂದೆಯೆ ನಾಂ ಪೇಳ್ದಪುದೆ? ಹಾಯ್!

ಶರ್ಮಿಷ್ಠೆ:—ಗುರುಮುಖದಿ ನೀಂ ಕೇಳಿ, ನನ್ನ ಮುಂದೇಕೆ ಮುಚ್ಚಿಡುವೆ ತಾತ! ಪೇಳೆನಗೆ.

ವೃಷಪರ್ವ:—ಕರ್ಕಶದ ನುಡಿಯುದಂ ಪಾಲಿಸುವ ಹೊಣೆ ನಿನ್ನ ಮೇಲಿಹುದು. ಅದಕಾಗಿ ನಾಂ ನುಡಿಯದಿಹುದು. ದೇವಯಾನೆಯು ನಿನ್ನ ಮೇಲಿನ ಸೇಡ ತೀರಿಸಲ್ ಆ ರೀತಿ ನುಡಿದಿಹಳು. ಬೇಡ ಮಗಳೆ ಕೇಳದಿರು ನೀಂ.

ಶರ್ಮಿಷ್ಠೆ:—ಅಪ್ಪಾ! ನನ್ನಿಂದೆ ನೊಂದವಳ್ ನನಗೇನೊ ಶಿಕ್ಷೆಯಂ ವಿಧಿಸಿಹಳು. ನನ್ನ ಮೇಲಿನ ವಾತ್ಸಲ್ಯದಿಂ ನೀನೆನಗೆ ಪೇಳದಿಹೆ. ತಾತಾ! ನನ್ನ ದೆಸೆಯಿಂದೆ ಬಂದಿರ್ಪ ನಮ್ಮೆಲ್ಲರಾ ಕಷ್ಟತಾಂ, ನನ್ನಿಂದೆ ಪರಿಹಾರ ಮಾದಪುದೆಂದು ತೋರುತಿದೆ. ಸಂತೋಷಮಲ್ತೆ ಜನಕ, ಪೇಳದಂ ಪಾಲಿಸುವೆನಾಂ.

ವೃಷಪರ್ವ:–(ನಿಟ್ಟುಸಿರು ಗರೆಯುತ್ತ) ಹಾ! ಮಗಳೇ! ದೇವ ಯಾನೆಗೆ ನೀಂ........ಆಜೀವ ದಾಸಿಯಪ್ಪೊಡೆ ಮಾತ್ರ......

ಶರ್ಮಿಷ್ಠೆ:–(ಕ್ಷಣಕಾಲ ಮೌನದಿಂದಿರ್ದು) ಇನಿತಾದೊಡಾ ದೇವ ಯಾನೆಯ ಮುನಿಸು ಮಾಣ್ದಪುದೆ? ಮುನಿದ ಗುರುವಿನ ಮನಂ ನೆಮ್ಮದಿಗೆ ಬಂದಪುದೆ? ಅಪ್ಪಾ! ದನುಜ ಕುಲವೆಲ್ಲ ಸಂತಸಂ ಪೊಂದುವುದೆ? ಹಾ! ಹಾ! (ಅಳುವಳು)

(ವೃಷಪರ್ವನು ಮಗಳ ಬಿಗಿದಪ್ಪಿ ಬೆನ್ನನ್ನು ಸವರುತ್ತಾ ಕಣ್ಣೀರು ಸುರಿಸುವನು. ಶರ್ಮಿಷ್ಟೆಯು ತಂದೆಯ ವಕ್ಷಸ್ಥಲದಲ್ಲಿ ಮುಖವಿಟ್ಟು ಅವನನ್ನೇ ನೋಡುತ್ತಾ ಬಿಕ್ಕಿ ಬಿಕ್ಕಿ ಅಳುತ್ತಿರುವಳು. ಇಬ್ಬರೂ ಕ್ಷಣ ಕಾಲ ದುಃಖಾಶ್ರುಗಳನ್ನು ಸುರಿಸುತ್ತಾ ಮೌನದಿಂದಿರುವರು. ಮಧ್ಯೆ ಮಧ್ಯೆ ದೀರ್ಘವಾದ ಉಸಿರನ್ನೆಳೆದು ಬಿಡುತ್ತಿರುವರು. ದುಃಖಾತಿರೇಕದ ಭಾವ ಮೊಗದ ಮೇಲೆ ಬಿಂಬಿಸುವುದು.)

ಶರ್ಮಿಷ್ಟೆ:—ಅಪ್ಪಾ! ಅಪ್ಪಾ!!......ಅಪ್ಪಾ!!!...ಹಾ!...ಹಾ!!

ವೃಷಪರ್ವ:--ಬೇಡ ಮಗಳೇ! ಮರುಗದಿರು. ನಿನ್ನ ನಾಂ ರೌರವಕೆ ನೂಕಲೆಂದಿಲ್ಲಿ ಬಂದಿಲ್ಲ ಕಂದ.........ಮಗಳನನ್ಯರ.........ತೊತ್ತಾಗಿ ಕಳುಹಲ್ಕೆ......ಪಿತನಾದವಂ ಮನವ ತಂದಪನೆ ಮಗಳೆ? ಹಾಯ್..... ಪೆಣ್ಮಕ್ಕಳಂ ಪಡೆದು ಅಕ್ಕರೆಯೊಳಾದರಿಸಿ ಪರರ ಸೆರಗಿನೊಳಿಕ್ಕಿ ಮದುವೆ ಯಂ ಗೈದಪುದು ಪೆತ್ತವರ ಕರ್ತವ್ಯಮಿರ್ದೊಡಂ, ಮತ್ತವರ ಪತಿಗೃಹಕೆ ಕಳುಹುತಿರೆ ಪಡೆದವರ ಹೃದಯಂಗಳೇಸೊಂದು ದುಃಖದಿಂ ಬೇಯು ತಿಹುದು. ಹಾಯ್! ನನ್ನೆದೆಯ ಪ್ರೇಮಪುತ್ಥಳಿಯು ನೀಂ. ನಿನ್ನನಾಂ ಚಿರಕಾಲ ದಾಸಿಯಾಗಲು ಕಳುಹಿ ಮತ್ತೆಂತು ಮಹಿಯೊಳಾಂ ಬಾಳ್ದಪೆನು? ಬೇಡ ಮಗಳೆ! ಬೇಡ. ಏನಾದರೇನುಂಟು ನನ್ನ ಕಂದಮ್ಮ. ನೀನೋರ್ವೆ ನನ್ನಣುಗಿ ಸುಖವಾಗಿ ಬಾಳಿದರೆ ನನಗೆಲ್ಲ ಸೌಭಾಗ್ಯಮುಂಟು.

ಶರ್ಮಿಷ್ಟೆ:—(ತುಸು ಮೌನದಿಂದಿದ್ದು ಆಲೋಚಿಸಲು ಮತ್ತಾವುದೋ ನಿರ್ಧಾರದ ಕಳೆಯು ಮೂಡುವುದು.) ಜನಕ!......ಜನಕ!! ಗುರುಸುತೆಯ ಮನದಿಷ್ಟಮಂ ನಡೆಸದಿರ್ದೊಡೆ ಮುಂದೆ 'ಗುರು'ವೆಮ್ಮ ರಾಷ್ಟ್ರದೊಳ್ ನಿಲ್ಲಲಾರಂ......ದೇವಯಾನೆಯ ಪಿತಂ......ನಮ್ಮ ರಕ್ಷಣೆಯ ನಾವೆಯಂ ಮುಣುಗಿಸುತೆ ನಮ್ಮೆಲ್ಲರಂ ನಡುನೀರಿನೊಳ್ ಕೈಬಿಟ್ಟು ನಡೆದಪಂ. ಆತನಿಲ್ಲದಿರೆ.......ರಕ್ಕಸರ ಕುಲಕೋಟಿ ನಾಶವಪ್ಪುದೆ ದಿಟಂ....ಅಪ್ಪಾ!...ಗುರುದೇವನಿಂಗಾಕೆಯೋರ್ವಳೆ ಮಗಳು. ತನ್ನಣುಗಿ ಯಂ ಸಂತೈಸಲಾತಂ ಮತ್ತಾವುದಂ ಲೆಕ್ಕಿಸದೆ, ನಮ್ಮನುಂ, ನಮ್ಮವರ ಸೌಭಾಗ್ಯಸಕಲಸಂಪದಮುಮಂ ತನ್ನ ಕಠಿಣತರಶಾಪಾಗ್ನಿಯಿಂ ದಹಿಸಲಾರ್ಪಂ. ತನ್ನೊಳಿರ್ದನುಪಮದ ಮಂತ್ರಶಕ್ತಿಯ ಬಲದಿ ಸತ್ತವರ ಬದುಕಿಪಂ, ತನಗಾಗದಿರೆ ಬದುಕಿರ್ದರಂನುಂ ಕೊಂದಪಂ......ನಿನ್ನ

ಹೊಟ್ಟೆಯ ಮಗಳು ನಾನಾಗಿ ಹುಟ್ಟಿದೊರ್ಡೇನು? ನಿನಗೆ ನಾನೋರ್ವಳೇ ಮಗಳಲ್ಲ ತಾತ. ರಾಕ್ಷಸೇಂದ್ರನು ನೀನು. ನಮ್ಮವರ ದೊರೆಯಾಗಿ ನಿಂದವನು......ನೀನೊಲ್ದು ಪಾಲಿಸುವ ದೇಶದಾದ್ಯಂತ ನಿನ್ನ ಮಕ್ಕಳೆ ತುಂಬಿಹರು ಜನಕ......ಅವರೆಲ್ಲರಾ ಕ್ಷೇಮಚಿಂತನೆಯ ಮುಂದೆ ನನ್ನ ದೇನ್ ಘನವೆ? ಅಪ್ಪಾ!......ನಮ್ಮ ರಾಜ್ಯದ ಜನರ ಹಿತವನೀಂ ಬಯಸಿ......ಮಗಳೆಂಬ ವಾತ್ಸಲ್ಯಮಂ ಮರೆದು, ಹೇ! ತಾತಾ! ನನ್ನ ನಂತೆಯೆ ನನ್ನ ಬಾಳಂ ಗುರುವಚನ ಧಾರೆಯೊಳ್, .ಕಡಿಕಡಿದು ರಣ ಚಂಡಿಯಾ ದೇವಯಾನೆಯ ಛಲಕೆ 'ದಿಗುಬಲಿ'ಯನಿತ್ತಿವ್ಮ ಪ್ರಜೆಗಳಂ ರಕ್ಷಿಸುತೆ ಶಾಂತಿಯಿಂ ನೆಲಸು.

ವೃಷಪರ್ವ:—ಅಯ್ಯೋ! ಅಯ್ಯೋ ಮಗಳೇ!......ಏನನಾಡುವೆ ನೀನು. ಹಾಯ್......ಸಾಮ್ರಾಜ್ಞಿಯೆಂದೆನಿಸೆ ಪತಿಗೃಹಕೆ ಸಂಭ್ರಮದಿ ತೆರಳಬೇಕಾಗಿರ್ದ ನಿನ್ನಂ......ಮತ್ತೋರ್ವಳಿಗೆ ತೊತ್ತಾಗಿ ನಾಂ ಕಳುಹು ವುದೇ? ಹಾಯ್! ಹತ ಭಾಗ್ಯನಾಂ......ಪಾಪಿ......ಪರಮ ಪಾಪಿಯು ನಾಂ. ಶರ್ಮಿಷ್ಠೆ!...ಓ! ಶರ್ಮಿಷ್ಠೆ!! ನನ್ನ ಸುತೆಯಾಗಿ ಜನಿಸುತ್ತೆ ನೀಂ ಗುರುಸುತೆಯ ದಾಸ್ಯಕ್ಕೆ ಕೊರಳನೊಡ್ಡುವುದಾಯ್ತೆ ಮಗಳೇ?

ಶರ್ಮಿಷ್ಠೆ:—ಅಪ್ಪಾ! ನಮ್ಮೊಣಿಕೆಯಾ ಸುಖವ ನಾಂ ಬಯಸಿ ಹುಟ್ಟಿಲ್ಲ. ನಮ್ಮವರನೆಲ್ಲರಂ ಕಷ್ಟದೊಳ್ ಕೆಡಹುತ್ತೆ ಸುಖವ ಕೊಂಬಾಸೆ ನನಗಿಲ್ಲ ಜನಕ. ಸುಖಮೂ ಅದಲ್ಲ. ದಿತಿಜ ಕುಲವಲ್ಲಭನ ಸುತೆಯಾಗಿ, ಜನ್ಮದಾತನ ಹೊಣೆಯೊಳೊಂದಂಶಮಂ ಪಾಲುಗೊಂಡೇ ಪುಟ್ಟಿಹೆನು... ರಾಜ್ಯ ಪರಿಪಾಲನೆಯ ಕರ್ತವ್ಯದೊಳೆನ್ನಯ್ಯನೆಂತಿರ್ಪನೋ ನಾನು ಮಂತೆಯೆ ನಮ್ಮವರ ಕ್ಷೇಮ ರಕ್ಷಣೆಗೆ......ಒರ್ವಳಾಂ ದೇವಯಾನೆಗೆ ತೊತ್ತಾಗಿ ದುಡಿದು, ದಾಸ್ಯದೊಳ್ ತನುವ ತೇದೊಡದೇನು? ದೈತ್ಯ ಕುಲ ಕೆಲ್ಲ ಸುಖಮುಪ್ಪುದಲ್ತೆ. ನನ್ನ ಕಷ್ಟದ ಫಲದಿ ನಮ್ಮ ರಾಜ್ಯದ ಜನಕೆ ವರ ಸುಖವನೊದಗಿಪ ಭಾಗ್ಯಮಂ ನಿನ್ನುದರದಿಂ ಪುಟ್ಟಿ ನಾಂ ಪಡೆದೆ ಜನಕ. ಸ್ವಜನರೆಲ್ಲರ ಕಷ್ಟಮಂ ಮೊತ್ತದೊಳ್ ಕೂಡಿಸುತೆ, ನಾನೋರ್ವಳೇ ಮತ್ತದಂ ಪಡೆದುಂಡು, ನಮ್ಮವರ ಹಿತಕಾಗಿ ನನ್ನೆಲ್ಲ ಸುಖಗಳಂ, ನಮ್ಮ ನಾಡಿನ ಸುಖಕೆ ಮುಡಿಪಾಗಿ, ನಾನಿದೋ ತ್ಯಾಗಬುದ್ಧಿಯೊಳರ್ಪಿಸುವೆ ತಾತಾ! (ಮೊಣಕಾಲನೂರಿ, ತುಸುಬಾಗಿ)ಕಷ್ಟದೊಳ ಗತಿಕಷ್ಟ ವೆಂದೆಣಿಸಿ

ನಾವಾವ ದಾಸ್ಯಮಯ ಜೀವನಕೆ ಬೆದರುತ್ತೆ ಹೇಸುತ್ತಲಿಹೆವೋ, ಮತ್ತದೇ ದಾಸ್ಯದೊಳ್ ನಿನ್ನಡಿಯ ದಯದಿಂದೆ ಸುಖವನರಸುತ್ತೆ ತಂದು ತೋರಿದಪೆ ನಾಂ. ದಯಮಾಡು ನನ್ನಯ್ಯ! ನನಗನುಜ್ಞೆಯಂ ನೀಡು. ಚಿತ್ತಶುದ್ಧಿಯ ಪೂಜ್ಯೆಯಿದು ಜನಕ! ಮನ್ನಿಸೆನ್ನಂ. [ತಂದೆಯ ಪಾದಗಳನ್ನು ಮುಟ್ಟಿ ಮತ್ತದೇ ಕೈಯ್ಗಳನ್ನು ಕಣ್ಣಿಗೊತ್ತಿಕೊಂಡು] ಅಪ್ಪಾ! ಪಿತೃಋಣ ಮುಕ್ತತೆಗೆ, ಗುರುವಚನ ಪಾಲನೆಗೆ, ಮೇಣೆನ್ನ ದೈತೇಯ ಕುಲಬಂಧುಗಳ ಸುಗಮಜೀವನಪಥಕೆ, ಪೂರ್ಣಭಕ್ತಿಯ 'ಹರಕೆ' ಯೆಂದೊಪ್ಪಿ ನಾನಿದೋ 'ದೇವಯಾನೆ'ಯ ಮನಸಿನಿಚ್ಛೆಯ ಮಹಾಯಜ್ಞದೊಳ್ ಶುಕ್ರನಧ್ವರಿಯಾಗೆ ಅಪ್ಪಾ! ಅಪ್ಪಾ!! ನಿರ್ಣೀತ ಪಶುವಾಗಿ ನಿಂದಪೆಂ, ಕಳುಹೆನ್ನ. (ವಂದಿಸುವಳು.)

(ಪರದೆ ಬೀಳುವುದು.)

೩ನೇ ದೃಶ್ಯ

[ಯಯಾತಿಯ ಅರಮನೆ. ಅಂತಃಪುರದ ಒಂದು ಭಾಗ. ಮಹಾರಾಣಿಯು ಕುಳಿತು ಯೋಚಿಸುತ್ತಿರುತ್ತಾಳೆ.]

ದೇವಯಾನೆ:—ಬಹುದಿನಗಳಿಂ ಮನದೊಳೆಣಿಸಿರ್ದ, ನನ್ನ ಹಿರಿಯಾಸೆ, ನಾನೆಣಿಸಿದೋಲ್ ಕೈಸೇರ್ದುದೆನಗೆ. ಕೊಳದ ಜಲದೊಳಗಿರ್ದು ಮಾನಮಂ ಮುಚ್ಚುತಳುತಿರ್ದ ನನ್ನಂ, ಪೆಗಲಿನುತ್ತರೀಯವನಿತ್ತು ಪೊರೆದಿರ್ದ ಮಹಾರಾಜನಾ 'ಯಯಾತಿ'ಯಂ ಧರ್ಮ ಸಮ್ಮತವಾಗಿ ವೈವಾಹದೊಳ್ ಕೈವಿಡಿದು ಸರ್ವಸಂಪತ್ತಿನಿಂ ತುಂಬಿರ್ಪ ಈ ಸಾಮ್ರಾಜ್ಯದಾ ಮಹಾರಾಣಿಯಾಗಿಯೆ ಬಂದೆನಲ್ತೆ! ತನ್ನೆದೆಯ ಪೂರ್ಣ ಪ್ರೇಮವನಿತ್ತು ನನ್ನನೇ ವರಿಸಿರ್ಪ ನನ್ನೊಲ್ಮೆಯಾ ವಲ್ಲಭನು ನಾನೆಣಿಸದಾ ಸುಖದ ಸಾಧನಂಗಳನೆ ತಂದಿತ್ತು ನನಗಾವ ಕೊರತೆಯುಂ ಹೊದ್ದದಂದದಿ ನೋಡುತಿಹನು. ಕರೆಯದೋಗುಡುವ ನೂರಾರು ದಾಸಿಯರು, ಸೇವೆಗಾಗಿಯೆ ಕಾದಿಹರು. ಹೆರಳುಹಾಕುವರಿಹರು, ಕಾಲನೊತ್ತುವರಿಹರು, ಪನ್ನೀರನೆರೆದೆರೆದು ಮೀಯಿಸುವರಿಹರು. ಶ್ರೀಗಂಧವಂ ತಳೆದೆನ್ನ ಮೈಯ್ಯ ಪೂಸುವರು, ಹೊಸ ಹೂವ ತಂದಿಟ್ಟು ಸೆಜ್ಜೆಯೊಳ್ ವಿಧ ವಿಧದ ಶೃಂಗಾರಮಂಗೈಯ್ಯುತಿಹರು. ದಾಸಿಯರ ತಂಡದಲಿ ಗರ್ವಿಷ್ಟೆ ಯಾ

ಶರ್ಮಿಷ್ಟೆಯೋರ್ವಳನುಳಿದು ಮತ್ತೆಲ್ಲರುಂ, ನಗುಮುಖದೊಳೆ ಸೇವೆಯಂ ಗೈಯ್ಯುತ್ತಲಿಹರು. ಆಕೆಗಿನ್ನುಂ ತನ್ನ ದುರಭಿಮಾನದ ಪಿತ್ಥವಿಳಿದಿಲ್ಲ. 'ಕಚ' ಕುಮಾರನನಂದು ನಾಂ ವಿಧ ವಿಧದಿ ಬೇಡುತಿರೆ ನನ್ನ ಬಯಕೆಯು ಸಲಿಸದಾತಂ ನನ್ನ ನೀಕರಿಸಿ ನಡೆದಾಗ, ನನ್ನಿರವನೇಡಿಸುತೆ ಘೊಳ್ಳೆಂದು ನಗುತಿರ್ದ ಶರ್ಮಿಷ್ಟೆಯೊಳ್ ನಾನೆನ್ನ ಮುಯ್ಯ ತೀರಿಸೆ ಕಾಲಮಂ ಕಾಯುತಿರ್ದಂತೆ, ಜಲಕೇಳಿಯೊಳ್ ದ್ರೋಹಮಂ ಬಗೆದೆನ್ನ ಮಾನಮಂ ಕಳೆದಿಹಳು. ನನ್ನೆದೆಯತಾಪಮಂ ಸಹಿಸಲಾರದೆ ನಾನು ಪ್ರತಿಹಿಂಸೆಗಾಕ್ಷಣವೆ ಛಲವ ಹೂಡುತ್ತೆ, ರಾಕ್ಷಸೇಂದ್ರನ ಕುವರಿಯಾಗಿರ್ದೊಡಂ, ನನ್ನೆದೆಯನುರಿಯಿಸಿದ ಶರ್ಮಿಷ್ಟೆಯಂ ದೈತ್ಯಗುರುವಾದೆನ್ನ ಪಿತನ ಬಲದಿಂದೆ ಆಜೀವದಾಸ್ಯದಲಿನರಳಿಸಲ್ ಮದುವೆಯೊಳ್ ಬಳುವಳಿಯ ಸೊತ್ತೆಂದು ನಾನಿಲ್ಲಿಗಾಕೆಯಂ ತೊತ್ತಾಗಿ ಪಡೆದು ಬಂದಿಹೆನು. ನನ್ನಯ್ಯ ನಾಣತಿಯ ಪಾಲಿಸಲ್ ಅವಳನಾಕೆಯ ಪಿತಂ ಧರ್ಮಸಮ್ಮತವಾಗಿ "ನೀನಿವಳ ದಾಸಿಯಾಗೆ"ಂದು ಹರಸುತ್ತೆ ಕಾಲ್ಗೆ ಕಬ್ಬಿಣ ತೊಡಿಸಿ, ಧಾರೆಯನ್ನೆರೆದೆನಗೆ ಕೈಯೆತ್ತಿ ಕೊಟ್ಟಿಹನು. ಅಂದಿನಿಂ ಧರ್ಮದಿಂದವಳೆನ್ನ ದಾಸಿ, ಧರ್ಮದಾ ದಾಸಿ. ನನ್ನ ಸೀರೆಯನುಟ್ಟು ನಡೆದಿರ್ದಾಕೆಗಿಂದು, ನಾನುಟ್ಟು ಹರಿದಿರ್ದ ಸೀರೆಯನೆ ನಾಂ ಕೊಟ್ಟೊಡುಂಟು. ಮೃಷ್ಟಾನ್ನ ಭೋಜನವ ನುಂಡುಂಡು ಸೊಕ್ಕಿರ್ದಾಕೆಗಿಂದು ನಾನುಂಡು ಬಿಟ್ಟಿದ್ದ ಕೂಳನಾದೊಡಂ ಕೊಟ್ಟೊಡುಂಟು. ಸುಪ್ಪತ್ತಿಗೆಯನೇರ್ದಲ್ಲಿ ಪವಡಿಸುತಲಿರ್ದಾಕೆ ಸುಖತಲ್ಪಶಯನದೊಳ್ ನಾನಿರಲು ನನ್ನ ಕಾಲ್ಗಳನೊತ್ತುತಿಹಳು. ಪಿತನ ರಾಜ್ಯದೊಳಲ್ಲಿ ದಾಸಿಯರ ಮೈ ಮೇಲೆಯೇ ನಡೆಯುತಿರ್ದಾಕೆ, ತನ್ನ ದರ್ಪಕೆ ತಕ್ಕ ಶಿಕ್ಷೆಯಂ, ಪಡೆಯಲೆಂದೇ ನನ್ನರಮನೆಗೆ ದಾಸಿಯಾಗುತೆ ಬಂದಿಹಳು. ಆಕೆಯೇಂ ಬಂದಿಹಳೆ? ಆಕೆ ಬಂದಿಹುದಲ್ಲ. ನಾನೆನ್ನ ಛಲದ ವಜ್ರಮುಷ್ಟಿಯೊಳವಳ ಕೇಶಂಗಳಂ ಪಿಡಿದಾಕಿ ಸೇಡ ತೀರಿಸಲೆಂದೆ ಸೆಳೆದು ತಂದಿಹೆನಿಲ್ಲಿ. ಆದೊಡಿನ್ನುಂ ಗರ್ವವಿಳಿದಿಲ್ಲ. ಹುಂ! ಇರಲಿ. ಬಿಂಕಮೆನಿತಿರ್ದೊಡೇಂ? ನನ್ನ ಕಾರುಣ್ಯದಾ ಕೈಯ್ಯ ನಾಂ, ಒಂದಿನಿತು ತಡೆ ಹಿಡಿದರಾಯ್ತು ನನ್ನೆದೆಯ ಕ್ರೋಧ ಫಣಿಯಂ ಕಣಕಿದಾ ಪಾಪಿಣಿಯು ತನ್ನ ಸಿರಿತನದ ಸೊರ್ಕನೆಲ್ಲವನೆನ್ನ ದಾಸ್ಯದೊಳ್ ಸವೆಸವೆದು, ಸತ್ತು ಬಾಳಿನೊಳ್ ಬಾಳಿ ಸಾಯುತಿಹಳು. ನನಗದೇ ಸಂತಸಂ; ನನ್ನ ಮನದಾನಂದಸಂಪದಂ. (ಪರದೆ ಬೀಳುವುದು.)

೪ನೇ ದೃಶ್ಯ

[ದಾಸಿಯಾದ ಶರ್ಮಿಷ್ಠೆ ಉದ್ಯಾನದಲ್ಲಿ ತನ್ನ ಗುಡಿಸಲ ಮುಂದೆ, ಹಳೆಯ ಸೀರೆಯೊಂದನ್ನುಟ್ಟು, ದೀನತೆಯ ಭಾವದಿಂದ, ಹೂಗಳನ್ನು ಮಾಲೆ ಕಟ್ಟುತ್ತಾ, ಅಡಿಗಡಿಗೆ ಕಣ್ಣೊರಸಿಕೊಂಡು, ನಿಟ್ಟುಸಿರು ಸೂಸುತ್ತಾ.]

ಶರ್ಮಿಷ್ಠೆ:—ಅಯ್ಯೋ! ಶೂನ್ಯಮಯ ಜೀವನವೆ! ಏಕಾಗಿ ಮುಂದೆ ಸಾಗುತಿಹೆ? ಎಲ್ಲರಂತುಸಿರಾಡಲನಿತೊಂದೆ ಹಕ್ಕಂಪಡೆದು, ಮಿಕ್ಕುದಂ ದಾಸ್ಯಕೂಪದೊಳದ್ದಿ ಲಯಿಸುತ್ತೆ, ಮತ್ತೇಕೆ ಮುಂದು ಮುಂದಕೆ ಸಾಗುತಿರುವೆ?......ಯಾರು...ನಿನಗಾಗಿ...ಎಲ್ಲಿ... ಕಾಯುತಲಿಹರೇ?...... ಮತ್ತಾರನೆಲ್ಲಿ ನೀಂ......ಕಾಯುತಿಹೆ?......(ನಿಟ್ಟುಸಿರು)...ಹಾಯ್! ಶಿವನೇ...ತೊತ್ತಿನೀ ದೀಕ್ಷೆಯಂ ಪಡೆದಂದೆ...ಸೌಭಾಗ್ಯಮೆಲ್ಲಂ...ಮಸಣ ಕೈದಿಹುದು......ದಿನ ದಿನಂ ಗುರುಸುತೆಯ......ಚಿತ್ತಫಣಿ ಸೇಡಿನಾ ಹೆಡೆಯೆತ್ತಿ......ಕಡಿಯುತಿಹುದು.....ನಂಜಿನಾ ಸೋನೆಯಂ ಸುರಿಸುತಿಹುದು ಮೂದಲೆಯ ನುಡಿಯುಲಗು......ಕ್ಷಣ ಕ್ಷಣಕು ಬಂದೆನ್ನ ಹೃದಯಮಂ ಭೇದಿಸುತೆ ಜೀವಮನೆ ಹೀರುತಿಹುದು.........(ನಿಟ್ಟುಸಿರು)......ಹಾಯ್!......ಪ್ರಕೃತಿ ರೂಪದ ಶಕ್ತಿಯೇ ಪೆಣ್ಣಿನೊಡಲಿನ ತತ್ವಮಂತೆ......ತಾಯ್ತನವೆ ಪೆಣ್ತನಕೆ ಮೂಲಮಂತೆ...ಹೆಣ್ಣಿನಂಗಾಂಗ ಸೌಂದರ್ಯಮೆಲ್ಲಂ ಪ್ರೇಮಕೊಪ್ಪಾಗಿಯೇ ಬಂದಪುದಂತೆ......ಆದೊಡೇಂ ದೇವಯಾನೆಯು ಮಾತ್ರ ಇನಿತೆಲ್ಲರಿಂ ಹೊರಗಾಗಿ ಹುಟ್ಟಿಹಳೆ? ಅಯ್ಯೋ! (ಹೇಸಿದಂತೆ)......ಕಠಿಣತರಪಾಷಾಣಮಂ ಕಡಿಕಡಿದು ಹೃದಯಮೆಂದಿರಿಸಿಹರೆ?......ಸರ ನರಂಗಳೊಳೆಲ್ಲ ಗರಳಮಂ ತುಂಬಿಹರೆ? ಹೊಟ್ಟೆಯೊಳ್ ಬರಿಯ ಕೊರಡಂ ಕರುಳೆಂದು ತುಂಬಿಸಿಹರೆ? (ಹಲ್ಲು ಕಡಿದು ನಿಟ್ಟುಸಿರು ಸೂಸುತ್ತಾ......) ಹಾಯ್......ನನ್ನಂತೆಯೇ ಹೆಣ್ಣಾಗಿ ಹುಟ್ಟಿಹಳು, ನನ್ನೊಡನಾಡಿಯಾಗಿಯೇ ಜತೆಯೊಳೇ ಬಳೆದಿಹಳು, ನನ್ನೊಳಾ ಭಾಗ್ಯಮಿಲ್ಲ, ಆದೊಡಂ ನಾನೆಂತು ಬರಲಿತ್ತೋ, ಮತ್ತಂತೆಯೇ 'ಸಾಮ್ರಾಜ್ಞಿ' ಯಾಗಿತ್ತ ಸಂಭ್ರಮದಿ ಬಂದಿಹಳು. ನಾವು ನಂಬಿದ ಧರ್ಮಮೇ ಕೈಗುಡಲ್ ತನ್ನ ಛಲ ಮೆರೆಸಂತೆ ನನ್ನನಿಲ್ಲಿಗೆ ತನ್ನ...ತೊತ್ತಾಗಿ ತಂದಿಹಳು. ಹಿಂಸೆಯನ್ನಿತ್ತಿತ್ತು ಪ್ರಾಣ ಮಾತ್ರದಿ ಬಿಟ್ಟಿಹಳು......(ನಿಟ್ಟುಸಿರು)......ಹಿಂದೆ ನಾನೆಮ್ಮ ರಾಜ್ಯದೊಳಲ್ಲಿ ಮತ್ತಾವಾವ ಸೇವೆಯಂ, ದೂತಿಯರ ಕೈಯಿಂದೆ

ಮಾಡಿಸದೆ ಬಿಟ್ಟಿರ್ದೆನೋ ಅದಕಿಂತ ನೂರ್ಮಡಿಯ ತುಚ್ಛ ತರವಾಗಿರ್ದೆ ನಿತೆನಿತೊ ಸೇವೆಯಂ ಗೈದಿರ್ಪೆನಿಲ್ಲಿ. ಆದೊಡಿನ್ನುಂ......ದೇವಯಾನೆಯ ಸಿಟ್ಟು ತಣಿದಿಲ್ಲ......ಸೇಡು ತೀರಿಲ್ಲ......ನನ್ನೆದೆಯ ಸಹನೆಯುಂ ಮೀರ್ವಂತೆ ಕಷ್ಟಮನ್ನಿತ್ತು ನೋಯಿಪಳು, ಹಂಗಿಪಳು, ಬಯ್ಯುವಳು, ಮತ್ತೋರ್ರೊರ್ಮೆ ಕಾಲಿನಿಂದೊದ್ದು ದರ್ಪದಿಂ ನೂಂಕುತಿಹಳು...... ಅಯ್ಯೋ? ಮುಂದೇನು ಗತಿ?......ಹುಂ......ಧರ್ಮಮಂ ಬಿಡಲಾರದೀ ದಾಸ್ಯಮಂ ಕೈಗೊಂಡೆ......ಶಿವನೇ ಧರ್ಮವೆಂತಿಹುದೋ? ನಾವೆಂತು ತಿಳಿದಿಹೆವೋ?......ನಮ್ಮ ಗುರು ಸ್ವಾರ್ಥದಿಂ ನೀಕರಿಸಿ ಬಿಟ್ಟಿರ್ದ ಧರ್ಮಮಂ ನನ್ನಯ್ಯ ನಿಃಸ್ವಾರ್ಥದಿಂ ಪಾಲಿಸಿದನಲ್ತೆ......ಗುರುವಾದ ರೇನಂತೆ, ನಮ್ಮಯ್ಯನಾ ಯೋಗ್ಯತೆಯು ಶುಕ್ರನಿಂಗೆಲ್ಲಿ ಬಹುದು? ತನ್ನಣು ಗಿಯಾ ಛಲಕಾಗಿ ನಂಬಿರ್ದ ತನ್ನೆಲ್ಲ ಶಿಷ್ಯರಂ ಚಿರಕಾಲ ತೊರೆವುದಕೆ ಸಿದ್ಧನಾಗಿರ್ದ ಗುರುವೆಲ್ಲಿ? ತನ್ನ ರಾಜ್ಯದ ಜನರಂ ಸುಕ್ಷೇಮದಿಂ ಕಾಪಿಡಲು ಮಗಳಾದ ನನ್ನಂ ಗುರುಸುತೆಗೆ ತೊತ್ತಾಗಿ ಬಲಿಯಿತ್ತು ತನ್ನವರ ನಂತೆಯೇ ತನ್ನ ಧರ್ಮಮಂ ಪಾಲಿಸಿದ ನನ್ನ ಪಿತನೆಲ್ಲಿ? ಹಾಯ್... ಅಪ್ಪಾ...ಅಪ್ಪಾ!!...ಧರ್ಮಸಮ್ಮತವಾಗಿ (ಸಂಕಟದಿಂದ) ವಿಧಿ ವಿಧಾನ ದೊಳಂದು ದಾಸಿತನಕೆನ್ನನೀಂ ಧಾರೆಯೆರೆಯುತಿರೆ, ನೀನಿತ್ತ ಉಪದೇಶ ವಾಕ್ಯಂಗಳನೊಂದನುಂ ಮರೆಯಲಾರೆನು ಜನಕ......“ಮಗಳೆ! ‘ದಾಸಿ’ ಯಾದೊಡದೇನು? ‘ಮಹಾರಾಜನರಸಿ’ಯಾದರೇನು? ‘ದಾನವೇಂದ್ರನ ಪುತ್ರಿ’ ನೀಂ. ‘ಧರ್ಮ’ದಿಂ ನಡೆ ಮಗಳೆ. “ಧರ್ಮ”ದಾ ನಿಜ “ದಾಸಿ” ನೀನಾಗಿ ನಡೆ...ಮುಂದದೇ “ಧರ್ಮ” ನಿನ್ನಂ ರಕ್ಷಿಪುದು”; ಎಂದೊರೆದು ಸುರಿಸಿರ್ದ ಕಣ್ಣೀರ ಕಣಗಳಂ ನಿನ್ನ ‘ನುಡಿಮುತ್ತು’ಗಳ ಜತೆಯಿಂದೆ ಜನಕಾ!......ನಾನೆನ್ನ ನಡತೆಯೊಳ್ ಕೋದು ಸರಗೈದು......ನನ್ನೆದೆಯ ತುಂಬಿಸುವ ದೈವಕ್ಕೆ......ಕಾಣಿಕೆಯನೀವೆ......ಅಪ್ಪಾ!...... ಎಲ್ಲಿರ್ದರೇನಂತೆ...(ನಿಟ್ಟುಸಿರು) .....ನಿನ್ನೊಂದು ಹಿತವಚನವೆ ‘ವಜ್ರ ಪಂಜರ’ವೆನಗೆ......

[ಅಷ್ಟರಲ್ಲಿ ಉದ್ಯಾನವನದ ಸೊಬಗನ್ನು ನೋಡುತ್ತಾ ಮಹಾರಾಜ ಯಯಾತಿಯು, ವಿಹಾರದ ಉಡುಪಿನಲ್ಲಿ ಒಬ್ಬನೇ ಬರುತ್ತಾನೆ.]

ಯಯಾತಿ:—(ಸ್ವಗತ) ಹೂವೆ ಹಾರುತ್ತ ಬಂದಂತೆ, ಹೊಸ ಹೂವಿನಾ ಪರಿಮಳಂ ಗಾಳಿಯೊಳ್ ತೂರುತ್ತೆ ಬರುತಿಹುದು. ಬಂಡುಂಡ ತುಂಬಿಗಳ್ ಸಡಗರದೊಳತ್ತಿತ್ತ ಹಾರುತಿಹವು......ಸಿಂಗರದೊಳಣಿಯಾದ 'ತೇರಿ'ನೊಲ್ ಕೈವಂದ ಮಾಮರಂಗಳ್ ಕಾಣುತಿಹವು...... ಮರಮರಂಗಳನಪ್ಪಿ, ನನ್ನನಪ್ಪಿರ್ದ ನನ್ನಾಕೆಯೊಲ್ ಸಂತಸದಿ ನಗುವಂತೆ ಅರೆಬಿರಿದ ಹೂಗಳಿಂ ಮಲ್ಲಿಕಾಲತೆಗಳೊಪ್ಪಿಹವು......'ಹೊಂಗೆ'ಯಾ ಹೂವಿಹುದು, 'ಶಿರೀಷ'ವರಳಿಹುದು, ಹೊನ್ನಿನಾ ಹೂವ ಹೊತ್ತಂತೆ 'ಸೇವಂತಿ' ಯಿಹುದು. 'ಮಂದಾರ'ವಿಹುದಿಲ್ಲಿ, 'ಪುನ್ನಾಗ'ವಿಹುದ, 'ರತ್ನ ಕಂಟಿಕೆ' ಯಿಹುದು, 'ಕರವೀರ'ವಿಹುದು; ತನುಮನಂಗಳ ಸೊಗದ ಸಂತಸಕೆ ಮುಡಿಪಾಗಿ ಎಲ್ಲಿ ನೋಡಿದೊಡಲ್ಲಿ 'ಕುಸುಮ ಸಾಮ್ರಾಜ್ಯ'ಮೇ ಕಾಣುತಿಹುದು.......'ಮನಸಿಜಂ' ಜೈತ್ರ ಯಾತ್ರೆಗೆ ಸಾಗುತಿರೆ ಬರಿದಪ್ಪ ತನ್ನ ತೂಣೀರಮಂ ತುಂಬಲ್ಕೆ ಕಾದಿಟ್ಟ ಕುಸುಮಶರದುಗ್ರಾಣಮಿದು. ಇಲ್ಲಿ ನೊಂದೊಂದೆ ನೋಟಗಳು ನನ್ನಾಕೆಯಂ...ನನ್ನ ಕಣ್ಣಿದೆರಿನೋಳ್ ತಂದು ತೋರ್ದಪುವು......ಹಾ! ದೇವಯಾನೆಯ ಸೊಬಗಿನಂಗಾಂಗಕುಸುಮಂಗಳೆಲ್ಲಂ ಒಂದಾಗಿ ಕೂಡಿಹವೆ? ಮೇಣಿಲ್ಲಿನಾ ಕುಸುಮಂಗಳೆಲ್ಲಂ ಒಟ್ಟಾಗಿ ಮತ್ತಾಕೆಯಂಗಾಂಗದೊಳ್ ಸೊಬಗ ತುಂಬಿಹವೆ?......ಏನಿದೇನುಬ್ಬಿ ಬರುತಿದೆ ನನ್ನೆದೆಯ ಸಂತಸದ ಕಡಲು!......ಹಸುರೆಲೆಯ ಸೀರೆಯನ್ನುಟ್ಟು, ಎಳೆದಳಿರನಸುಗೆಂಪಿನಾ ಕುಪ್ಪಸವ ತೊಟ್ಟು, ಘಮಘಮಿಪ ಪುಷ್ಪಗಂಧವ ತೆಗೆದು ಬೊಟ್ಟಿಟ್ಟು, ಒಯ್ಯಾರದಿಂ ಉದ್ಯಾನವನಸಿರಿಯು, ರತಿಯ ರೂಪಿನೊಳಿಲ್ಲಿ, ಪೂಸರದಿ ಶೃಂಗಾರಮಂಗೊಂಡು ತಂಗಾಳಿಯೊಳ್ ತೊನೆಯುತಿಹಳು. ಪುಟವ ನೀರಿನ ಬುಗ್ಗೆಯಿಂ ಹಾರುತಿಹ ನೊರೆಮುತ್ತಿನಾ ಸೇಸೆಯಂ ತಳಿದು ಪುಷ್ಪಗುಚ್ಛದ ಕೈಯ ಕಾಣಿಕೆಯನೇ ಹಿಡಿದು, ತನ್ನೊಲ್ಮೆಯಾ ಹಸೆಗೆ 'ಬಾ'ಯೆಂದು ಮನದನ್ನ ಮದನನಂ ಕರೆಯುತಿಹಳು.

ಶರ್ಮಿಷ್ಠೆ:— (ಯಯಾತಿಯನ್ನು ದೂರದಿಂದಲೇ ಕಂಡು) ಅಯ್ಯೊ!......ಮಹಾರಾಜ ನೀಕಡೆಯೇ ಬರುತಿಹನು......ದೇವಯಾನೆಯಿಂ ಬಳಿಯೊಳಿಹಳೆ? ಇಲ್ಲ. ಏಕಾಕಿಯಾಗಿಹನು......ಅದೇನು ಜತೆಯ ನಗಲದೆ ನಡೆಯುತಿರ್ದಾಕೆ ಮತ್ತೇಕೆ ಬಂದಿಲ್ಲ?......ರಾಜೇಂದ್ರನೇ

ತಾನಾಗಿ ಒಂಟಿತನಕಾಶಿಸುತೆ ತಾನಿತ್ತ ಬಂದಿಹನೆ? ಅಲ್ಲದೊಡೆ ತಾನಾಗಿಯೇ ಮತ್ತಾಕೆ ಬಾರದುಳಿದಿಹಳೆ? ಏನಾದರಿರ್ದಪುದು.........ಹಾಂ! ಒಡಲಭಾರದಿ ನಡೆಯಲಾರಳು ಪಾಪ......(ಒಂದಿಷ್ಟು ಯೋಚಿಸಿ) ಏನು! ಏನಾದರೇನು?......ಇನ್ನೆನಿತು ದಿನ.........ಎಲ್ಲವುಂ ನುಡಿದು...... ಕಾಲ್ವಿಡಿದರೇನಹುದು?......[ಅದೇ ನಿಶ್ಚಯದಿಂದ, ಅವಸರವಸರವಾಗಿ, ಹೂಗಳನ್ನೂ ಹೂಮಾಲೆಗಳಗಳನ್ನೂ ಬುಟ್ಟಿಯಲ್ಲಿಟ್ಟು, ಆ ಬುಟ್ಟಿಯನ್ನೆ ಕೈಗೆತ್ತಿಕೊಂಡು, ಸೆರಗು ಸರಿಪಡಿಸಿ, ನಿಂತು ಇತ್ತ ನೋಡದ ಅರಸನತ್ತ ನೋಡುವಳು.........ಮೆಲ್ಲನೆ ಕೆಮ್ಮುವಳು· ರಾಜನು ದೃಷ್ಟಿಯನ್ನು ಈ ಕಡೆ ಹರಿಯಿಸುವನು. ಈಕೆಗೊಮ್ಮೆ ಬೆಚ್ಚಿದಂತಾಯ್ತು......ಗಂಟಲು ಸರಿಪಡಿಸಿಕೊಂಡು......]

ಶರ್ಮಿಷ್ಠೆ:— ಸ್ವಾಮಿ!......ದಾ ಸಿ ಯಾ ದೆ ನ್ನ......ಪ್ರಣಾಮವನಾದೊಡಂ......ಸ್ವಿಕರಿಸಲಿಡೆಯುಂಟೆ ಜೀಯ!

ಯಯಾತಿ:— (ಅವಳನ್ನೆ ನೋಡುತ್ತ ಎರಡು ಹೆಜ್ಜೆಯ ಮುಂದಿಟ್ಟು.) ಹುಂ...ಆ...ಶರ್ಮಿಷ್ಠೆಯಲ್ಲವೇನು?

ಶರ್ಮಿಷ್ಠೆ:—(ವಿನೀತ ಭಾವದಿಂದ) ಅಹುದು ಜೀಯ!......ಆ ನಿರ್ಭಾಗ್ಯಳೇ ನಾನು......ನಿಮ್ಮಾಕೆಯಾ ಊಳಿಗದ ಹೆಣ್ಣು.

ಯಯಾತಿ:— ಓ!......ಶರ್ಮಿಷ್ಠೆ! ......ದೈತ್ಯರಾಜನ ಮಗಳು ನೀಂ......ಹುಂ......ವಿಧಿ......

ಶರ್ಮಿಷ್ಠೆ:—[ಹೂವಿನ ಬುಟ್ಟಿಯನ್ನು ಕೆಳಗಿಟ್ಟು ಮೊಣಕಾಲುಗಳನ್ನೂರಿ ಬಗ್ಗಿ ರಾಜನ ಪಾದಗಳನ್ನು ಮುಟ್ಟಿ ಮೂರು ಸಲ ತನ್ನ ಕಣ್ಣುಗಳಿಗೊತ್ತಿಕೊಂಡು ಕೈಮುಗಿದು ರಾ ಜ ನ ಮುಖವನ್ನೊಮ್ಮೆ ಭಾವಪೂರ್ಣ ದೃಷ್ಟಿಯಿಂದ ನೋಡಿ ಹಾಗೆಯೇ ಗಗನವನ್ನು ನೋಡುವಳು. ನಗುವೊಂದು ಮೆಲ್ಲನೆ ಮಿಂಚಿ ಮಾಯವಾಗುವುದು. ಯಯಾತಿಯು ಈಕೆಯನ್ನು ಆಪಾದಮಸ್ತಕವಾಗಿ ನೋಡುವನು; ನೋಡಿದಂತೆಯೇ ಬೇರೆ ಕಡೆ ನೋಡಲಾರಂದಂತಾಗುವುದು. ಅದನ್ನು ಆಕೆಯೂ ಸೂಕ್ಷ್ಮದಿಂದರಿತುಕೊಂಡಳು. ಎದ್ದು ನಿಲ್ಲುವಳು.]

ಯಯಾತಿ:—ಏನು ಬಹುವಾಗಿ ನೊಂದಂತೆ ಕಾಣುತಿದೆ?

ಶರ್ಮಿಷ್ಠೆ:— ಇಲ್ಲ ಜೀಯ. (ನಿಟ್ಟುಸಿರು.)

ಯಯಾತಿ:—ಮತ್ತೇಕೆ ನಿಟ್ಟುಸಿರು?

ಶರ್ಮಿಷ್ಠೆ:—......ಪ್ರಭೋ!......ಬಯಕೆಯೊಂದೆನ್ನ ಹೃದಯದೊಳ್ ಜೇಯುತ್ತಿದೆ......

ಯಯಾತಿ:—ಏನದು?

ಶರ್ಮಿಷ್ಠೆ:—ರಾಜೇಂದ್ರ! (ನಿಟ್ಟುಸಿರು) ನನ್ನದಾಗಿಹುದೇನಿಲ್ಲಿ... ಇಹುದೆಲ್ಲ ನಿನ್ನದಲ್ಲಾ!......ಆದೊಡಂ...ನಡೆನಡೆದು ಬಳಲಿರ್ಪ...... ದಿವ್ಯಪಾದಂಗಳಂ......ಇಲ್ಲೆ...ಇಲ್ಲಿ ಕಾಣುತಿದೆ,......ಈ ಕುಟೀರದೊಳಗೊಯ್ಯುತ್ತೆ......ಅರೆಘಳಿಗೆ......ವಿಶ್ರಾಂತಿ......

ಯಯಾತಿ:—(ಸುತ್ತಲೂ ನೋಡಿಕೊಂಡು) ಅದಕೇನು? ಶರ್ಮಿಷ್ಠೆ ನಡೆಮುಂದೆ. [ಶರ್ಮಿಷ್ಠೆಯು, ಹರ್ಷವನ್ನಾಂತು, ಕೊರಳ ಬಗ್ಗಿಸಿ, ಹೊರಳಿ ಹೊರಳಿ ಅರಸನನ್ನು ನೋಡುತ್ತಾ, ಅವನು ನಡೆಯುವ ದಾರಿಯಲ್ಲಿ ಬುಟ್ಟಿಯಲ್ಲಿನ ಹೂಗಳನ್ನು ತೆಗೆತೆಗೆದು ಚೆಲ್ಲುತ್ತಾ ಮನೆಗೆ ಕರೆದೊಯ್ವಳು. ಅಲ್ಲಿ ಇದ್ದುದರಲ್ಲಿ ವಿಶಾಲವಾದ ಸ್ಥಳದಲ್ಲಿ ಕೂಡ್ರಲೊಂದು ಬೆನ್ನಿಗೊಂದು ಹೀಗೆರಡು ಮಣೆಗಳನ್ನಿಟ್ಟು, ಹೂಗಳನ್ನೋ ಹೂಮಾಲೆಗಳನ್ನೋ ಅವುಗಳ ಮೇಲೆ ಮೆದುವಾಗುವಂತೆ ಹರಹುವಳು. ಕೈಯನ್ನು ಜೋಡಿಸಿಕೊಂಡು ಅರಸನಿಗೀ ಆಸನವನ್ನು ತೋರಿಸಿ ಸನ್ನೆಯಿಂದಲೇ ಕೂಡ್ರಬೇಕೆಂದು ಬಿನ್ನೈಸಿಕೊಳ್ಳುವಳು. ಅವನೂ ಅವಳನ್ನೂ ಅವಳ ಸಿದ್ಧತೆಯ ಕ್ರಮವನ್ನೂ ನೋಡುತ್ತಾ ಅವಳ ಬೇಡಿಕೆಯಂತೆ ಹೂಹರವಿರ್ದ ಮಣೆಯ ಮೇಲೆ ಕುಳಿತುಕೊಳ್ಳುವನು.]

ಶರ್ಮಿಷ್ಠೆ:—(ಕೂತೂಹಲದಿಂದ) ಪಾದಂಗಳಂ......ಕರ್ಚಲೇ?

ಯಯಾತಿ:—ಅತಿಥಿ ಪೂಜೆಯೇನು?

ಶರ್ಮಿಷ್ಠೆ:—ಸ್ವಾಮಿ........[ಮೆಲ್ಲನೆ ನಗುನಗುವಾಗಿ ಒಳಗೆ ನಡೆದು, ಮಣ್ಣಿನ ಪಾತ್ರದಲ್ಲಿ ನೀರನ್ನು ತಂದು ತಾನುಣ್ಣುವ ಪಾತ್ರದಲ್ಲಿ ಅರಸನ ಪಾದಗಳನ್ನು ಹಿಡಿದೆತ್ತಿ ಇಟ್ಟು, ತಂದ ನೀರನ್ನೆರೆದು ತೊಳೆಯುವಳು. ಯಯಾತಿಯು ಈ ಕೃತಿಯಿಂದ ಪರವಶನಾದವನಂತೆ ಬೆಪ್ಪಾಗಿ ಅವಳನ್ನೇ ನೋಡುತ್ತಿರುವನು. ಶರ್ಮಿಷ್ಠೆಯು, ರಾಜನ ಪಾದಗಳನ್ನು ತೊಳೆದಾ ಮೇಲೆ ತನ್ನ ಸೀರೆಯ ತುದಿಸೆರಗನ್ನೆಳೆದು ಅದರಿಂದ ಪಾದದ ನೀರನ್ನೊರಸುವಳು. ಬರಿದಾದ ವಕ್ಷಸ್ಥಳದ ಮೇಲೆ ರಾಜನ ದೃಷ್ಟಿ

ಬೀಳುವುದು. ತೋರೆಗೊಡದೆ ಅರಸನದನ್ನು ಮುಖವನ್ನು ತಿರುಗಿಸುವುದರ ಮೂಲಕ ಮರೆಪಡಿಸಿದರೂ ಚಾಣಾಕ್ಷಳಾದ ಶರ್ಮಿಷ್ಟೆಯು ಅರಿತುಕೊಂಡು, ಮೇಲೆದ್ದು ಸೆರಗನ್ನು ಹೊದೆದುಕೊಂಡು, ಪಾದೋದಕವನು ತನ್ನ ತಲೆಗೆ ಚಿಮುಕಿಸಿಕೊಂಡು, ಒಂದಿಷ್ಟನ್ನು ಕುಡಿದೇ ಬಿಡುವಳು. ಮತ್ತೆ ಪುನಹ ಈಕೆಯು ಒಳಗೆ ನಡೆದು ಸಣ್ಣ ಬುಟ್ಟಿಯೊಂದರಲ್ಲಿ ಹೂವಿನ ಹಾರವೊಂದನ್ನೂ ಪಕ್ವವಾದ ಫಲಗಳೆರಡನ್ನೂ ಇಟ್ಟು ತಂದದನ್ನು ಮಹಾರಾಜನ ಕೈಗೆ ಕಾಣಿಕೆಯಾಗಿತ್ತು ಮತ್ತೊಮ್ಮೆ ನಮಸ್ಕಾರ ಮಾಡಿ ಒಂದಿಷ್ಟು ದೂರ ಸರಿದು ನಿಂತುಕೊಳ್ಳುವಳು.]

ಯಯಾತಿ:—ಶರ್ಮಿಷ್ಟೆ! ಆಯಿತೇನು......

ಶರ್ಮಿಷ್ಟೆ:—[ಮತ್ತೊಮ್ಮೆ ಸೆರಗನ್ನೆಳೆದುಕೊಂಡು ನೆಲವನ್ನು ನೋಡುತ್ತ ತುದಿ ಸೆರಗನ್ನು ತನ್ನ ಕೈಯ್ಯಳಿಂದ ತಿರುವುತ್ತಾ.] ಭೂವರೇಣ್ಯಾ! ಆಗಲೇನುಂಟು......ಮೇಣ್ ಆದುದೇನುಂಟು.........(ನಿಟ್ಟುಸಿರನ್ನು ಸೂಸಿ) ನೀನನ್ಯಥಾ ಭಾವಿಸದಿರೆ ದೀನೆಯಾಗಿರ್ಪೆನಗೆ ಮುನಿಯದಿರೆ...... ಬಿನ್ನಹವದೊಂದಿತ್ತು.

ಯಯಾತಿ:—(ಹುಬ್ಬುಗಳನ್ನೊಮ್ಮೆ ಕೂಡಿಸಿ, ದೃಷ್ಟಿಯನ್ನೊಮ್ಮೆ ನೆಲಕ್ಕೆ ಚೆಲ್ಲಿ, ಮೆಲ್ನಗುವೊಂದನ್ನು ತುಟಿಯಿಂದ ಮುಚ್ಚಿಕೊಂಡು) ಸಿಟ್ಟೇಕೆ? ಪೇಳಲೇನುಂಟು? ಪೇಳೆಲ್ಲಮಂ.

ಶರ್ಮಿಷ್ಟೆ:—(ಗಂಭೀರತೆಯಿಂದ) ರಾಜೇಂದ್ರ! ಹೆಣ್ಣಾದೊಡೇಂ?.........ಗಂಡಾದೊಡೇಂ? "ಧರ್ಮ"ಮಂ ಪಾಲಿಸಲ್ ಧರೆಯೊಳೆಲ್ಲರುಂ ಭಾಗಿಗಳಲ್ತೆ ಜೀಯ?

ಯಯಾತಿ:—ಅಹುದು.

ಶರ್ಮಿಷ್ಟೆ:—(ಮಂದ ಹಾಸದಿಂದ) ಅನತಿದಿನಗಳೊಳಿನ್ನು ನಮ್ಮ ಗುರುಸುತೆಗೆ ಹೂಮುಡಿಸುವಾ ಹಬ್ಬವೊಂದಿಹುದಲ್ತೆ ಸ್ವಾಮಿ,.........

ಯಯಾತಿ:—(ಮುಗುಳು ನಗೆಯಿಂದ) ಹುಂ!

ಶರ್ಮಿಷ್ಟೆ:—ಸಾವಿರ್ವರುಂ ಒಂದೆ ಪ್ರಾಯದ ಕೆಳದಿಯರ್ ಮೊದಲು......ಅವಳ ಭಾಗ್ಯವೆ ಭಾಗ್ಯ!......ಶೀಘ್ರದೊಳ್ ಯುವರಾಜನಂ ಪಡೆಯುವಳು......

ಯಯಾತಿ:—(ಸಂತೋಷದಿಂದ ಮುಗುಳು ನಗುತ್ತ) ಹುಂ! ಭಗವದಿಚ್ಛೆ.

ಶರ್ಮಿಷ್ಠೆ:—(ತುಸು ವಿಷಾದಪೂರ್ಣ ಭಾವದಿಂದ) ಪ್ರಭೊ!... ನಿನಗಾಗಿ ಮಕ್ಕಳಂ ಪಡೆವಾಕೆ, ನಿನ್ನರಸಿ, ಆ ದೇವಯಾನೆಗೆ......ನಾಂ ದಾಸಿಯಾಗುತೆ ಬಂದುದಂ ನೀನರಿವೆಯಲ್ತೆ?

ಯಯಾತಿ:—ಬಲ್ಲೆ.

ಶರ್ಮಿಷ್ಠೆ:—ನನ್ನಯ್ಯನಾ ರಾಜ್ಯದೊಳಲ್ಲಿ, ನಾನುಂ...... ಮೊದಲು......ನೃಪತನುಜೆಯಾಗಿಯೇ ಬಾಳುತಿರ್ದೆ......ಆದೊಡೇಂ? ನನ್ನ ದುರದೃಷ್ಟ...ನಿನ್ನಾಕೆಯೂ ತೊತ್ತಾಗಿ .....ನಾನಿಲ್ಲಿ ಬಂದೆ......

ಯಯಾತಿ:—ಏನಾದೊಡೇನು ಶರ್ಮಿಷ್ಠೆ! ನಿನ್ನವೋಲ್ ತ್ಯಾಗ ಜೀವಿಗಳನೆಲ್ಲಿಯುಂ ಕಂಡಿಲ್ಲ ನಾಂ.

ಶರ್ಮಿಷ್ಠೆ:—ನನ್ನನುಂ ಬಹುಕಾಲ ನೀಂ ಕಾಣಲಾರೆ.

ಯಯಾತಿ:—ಅದೇನು?

ಶರ್ಮಿಷ್ಠೆ:—ಇನ್ನೆನಿತು ದಿನ?......ಇನ್ನೆನಿತು ದಿನ ನಾಂ...... ಬದುಕುತಿರಲಿ? ಕಷ್ಟದಾ ಕೆಲಸಮೆನಿತಿರ್ದೊಡಂ,......ಗೈದದಂ, ಪಡೆದನುಭವದಿ......ಪಳಗಿರ್ಪೆನಾಂ......ಆದೊಡಂ.........ಹೆಣ್ಣಲ್ಲವೇ ಜೀಯ ನಾಂ?

ಯಯಾತಿ:—ಏನಾಯ್ತು ಶರ್ಮಿಷ್ಠೆ!......ಇನಿತು ದಿನವಾಗಿರ್ದೊಡಂ, ಕಷ್ಟ ನಿಷ್ಠುರವನೊಂದನುಂ ದೂರಿರ್ದುದಿಲ್ಲ ನೀಂ.

ಶರ್ಮಿಷ್ಠೆ:—ಇಂದುಂ...ನಾನಾರನೂ..ದೂರುತಿಲ್ಲ, ನನ್ನಳಲ... ನೈವೇದ್ಯಮುಂ......ಸ್ವಾಮಿ,......ನಿನ್ನಡಿಯೊಳರ್ಪಿಸಲ್ ಮತ್ತೊಮ್ಮೆ ನಿನ್ನಾಜ್ಞೆಯಂ ಬೇಡುತಿಹೆ......

ಯಯಾತಿ:—(ಉಸಿರನ್ನೊಮ್ಮೆ ಉದ್ದವಾಗಿ ಎಳೆದು ಬಿಡುತ್ತಾ) ಹುಂಂಂ! ಹೇಳು.

ಶರ್ಮಿಷ್ಠೆ:—(ನಿಟ್ಟುಸಿರನ್ನೆಳೆದು ಕ್ಷಣಕಾಲ ಯೋಚಿಸಿ) ದಿನದಿನಂ ಅರಮನೆಯ......ಸುಖಭೋಗ ಸಾಧನಂಗಳನೆಲ್ಲಮುಂ.........ನೋಡ ನೋಡುತೆ ಮನಂ.....ಹಿಂದಿನಾ ಸವಿನೆನಹಿನತ್ತಮೇ ಸಾಗುತಿಹುದು. (ವಿಷಾದದಿಂದ)......ಸುಖದೊಳೇ ಹುಟ್ಟಿ ಬೆಳೆದಿರ್ದು...ಮುಂದಿನಾ... ಸುಖದಾಸೆಯಾ......ಕಲ್ಪನೆಯ ಜ್ಞಾನಮುಂ ಪಡೆದು,......ಮತ್ತೆಲ್ಲಮುಂ ವಿಸ್ಮೃತಿಯೊಳದ್ದುವುದು . . . . . ದುಃಸ್ಸಾಧ್ಯಮಲ್ತೆ......'ಧರ್ಮ'ವೋ?

ಮೇಣೆಮ್ಮ ಕರ್ಮವೋ?..... ಮತ್ತಾವುದಾದೊಡದೇನು? ...... ಮನ ದಿಷ್ಟವಂ ಪಡೆಯಲ್ಕೆ.. ...ತಡೆದಡ್ಡಸಿಂದಾಗ...... ಜೀವನದ... ನಮ್ಮ ಹಿರಿಯಾಸೆ......ಕೈಸೇರದಿರ್ದಾಗ ... ಮನವದೇ ... ಪೂರ್ವಮನೋ.... ಪ್ರತಿಕೂಲವುನೋ... ನೆನೆನೆನೆದು...ಕೊರಗುವುದು ಸಹಜಮಲ್ತೆ?......

ಯಯಾತಿ:–[ಕರುಣಪೂರಿತ ದೃಷ್ಟಿಯಿಂದ, ನಿಟ್ಟುಸಿರು ಸೂಸುತ್ತಾ ಮೌನದಿಂದ......ಮೆಲ್ಲನೆ ಹುಂ! ಎನ್ನುತ್ತಾನೆ.]

ಶರ್ಮಿಷ್ಠೆ:—ಜೀಯಾ! ಕೆಸ್ರೀಥದೊಳಗೋರ್ವನಂ ಬಡಿದು ಕಾಲ್ಮುರಿದು.......ಮತ್ತವಂ ನೊಂದು......ನರಳುತಿರೆ,......ಬಲವಂತ ಮಂ ಗೈದವನ ಕೈಯ್ಯಿಂದೆ.. ...ಪರಿಪುಷ್ಟ ತೇಜಿಗಳ್ ಮುಂದೆಳೆವ...... ತನ್ನ 'ತೇರಂ'......ನೂಂಕಿಸುತೆ. ವರೂಥದೊಳ್ ಕುಳಿತು......... ಸವಾರಿಯಂ ಗೈದಪುದು......ಜಗದೊಳೆಷ್ಟೊಂದು ಸೊಗಸು?

ಯಯಾತಿ:—ಶರ್ಮಿಷ್ಠೆ! ನಿನ್ನ ಮಾತಿನಾ ಮರ್ಮವೇನ್? ಅರಿಯದಾಗಿಹೆನು. ಪೇಳು......

ಶರ್ಮಿಷ್ಠೆ:—ಪ್ರಭೋ! (ಮಂಡಿಯನ್ನೂರಿ ಕುಳಿತು) ಮಹಾರಾಜ ರಾಣಿಯರು ನೀವ್. (ವಿಷಾದವಿಮ್ಮಡಿಸಿ)......ನಿಮ್ಮ ಸೆಜ್ಜೆಯನನು ದಿನಂ......'ದಾಸಿ' ನಾಂ......ನಾನೆನ್ನ ಕೈಯ್ಯಿಂದೆ ಗುಡಿಸುತುಜ್ಜುತೆ ಶೃಂಗಾರವಮಂ ಗೈಯ್ಯುತಿಹೆನು. (ಮೇಲೆ ನೋಡುತ್ತಾ)......ನವರತ್ನ ಕನಕಮಯ ಪರ್ಯಂಕವಂ......ಸರಿಗೊಳಿಸುತಿರ್ಪುದು ನಾಂ...ಮೇಲೆತ್ತ ರದ......ಮುತ್ತಿನಾ ಝುಲ್ಲರಿಗಳಂ, ನವನವತೆಯಂ ಬೀರಲ್ಕೆ, ತೆಗೆಯು ತೋರಣದಿ ತೂಗಿಪುದು ನಾಂ...ಹಂಸದಾ ತುಪ್ಪಳಿನ...ತಲ್ಪವಂ...... ಮಿರಮಿರನೆ ಮಿರುಗುತಿಹ...ಚಿತ್ರತರ...ಮೇಲ್ಹಾಸಿನಿಂ...ಪಸದನಂಗೊಳಿ ಪವಳೆನಾಂ......ಪನ್ನೀರ ಚಿಮುಕಿಸುತೆ,.........ಪರಿಮಳಿಪ ಪುಷ್ಪಂ ಗಳಂ ಹರವಿ,......ಹಾಲು ಹಣ್ಗಳನಿಟ್ಟು,......ಕತ್ತುರಿಯ ನರೆದಿಟ್ಟು,... ಕಪ್ಪುರದ ವೀಳ್ಯಮಂ ಹೊನ್ನಿನಾ ತಟ್ಟೆಯೊಳ್ ತುಂಬಿಟ್ಟು......ಮಹಾ ರಾಣಿಯಂ ಕರೆತಂದು ಮಲಗಿಸುತೆ,......ವ್ಯಜನದಿಂ ಬೀಸಿ......... ಕಾಲೊತ್ತಿ, (ರಾಜನನ್ನು ನೋಡುತ್ತಾ)......ಮಹಾರಾಜನಾಗಮನ ಕಾಲಮಂ ಕಾದು......ಮತ್ತಾಜ್ಞೆಯಂ ಪಡೆದು, (ನಿಟ್ಟುಸಿರನ್ನು ಸೂಸಿ) ನಿತ್ಯದೊಳ್ ನಾನಿತ್ತ ಬಂದಪೆಂ......ತಲೆಯ ಮೇಲ್ ಕೈಯ್ಯ ಹೊತ್ತು. (ಪುನಹ ನಿಟ್ಟುಸಿರು, ತುಸು ಕಣ್ಣೀರು.)

ಯಯಾತಿ:—[ಕರುಣೆಯೂ, ಗಂಭೀರತೆಯೂ ಕೂಡಿರುವ ಭಾವದಿಂದ] ಹ್ಹಾಂ! ಬಹುದೊಡ್ಡ ವ್ರತವ ನೀಂ ಕೈಕೊಂಡು, ವಿರಕ್ತತೆಯೊಳೇ ಕೂಡಿಡಿರ್ಪೆಯೆಂದೆಣಿಸಿರ್ದೆ ನಾಂ. ನನ್ನೂಹೆ ತಪ್ಪು......ಹುಂ.

ಶರ್ಮಿಷ್ಠೆ:—(ಶೋಕ, ಗಂಭೀರ, ಭಾವಗಳು ಕೂಡಿ) ಮಹಾರಾಜನರಮನೆಯ ವ್ಯವಹಾರವೇ......ನನ್ನೆದೆಯ......ಆಸೆಯಂ ಕೆರಳಿಸಿತು. ಜವ್ವನದ ಏರಿನೊಳ್...ಚಿತ್ತಮಂ ಸೆಳೆಯುತಿಹ...ವಿಲಾಸಮಯ... ದೃಶ್ಯಂಗಳಂ ನೋಡನೋಡುತ್ತೆ......ನಿಮ್ಮನ್ನರಾ ವಿಲಾಸಿಗಳ ಮಧ್ಯದೊಳ್ ಬೆರೆಯುತ್ತೆ ಮತ್ತಾರಿಗುಂ ಪ್ರಕೃತಿಯಂ ಮೀರಿ......ವಿರಕ್ತತೆಯೊಳಿರ್ದಪುದು ಸಾಧ್ಯಮೆ?......'ಕಾಲ ದೇಶ'ಂಗಳೊಂದಾಗಿ 'ಕಾರ್ಯಕಾರಣ'ಂಗಳ ಹೊಸೆದು ಪ್ರಭೋ! (ದೀನವಾಣಿಯಿಂದ)'ಕರ್ಮ'ಕಾಜ್ಞೆಯನಿತ್ತು 'ಫಲ'ವನೀಕ್ಷಿಸುತಿಹವು.

ಯಯಾತಿ:—ಹೋ! (ತಲೆಯನ್ನಾಡಿಸುತ್ತಾ) ಶರ್ಮಿಷ್ಠೆ! ನಿನ್ನ ಬಯಕೆಯ ಬೇಹಿನರಿವಾಯ್ತು ನನಗೆ. ದೇವಯಾನೆಗೆ ಹೇಳಿ ಶೀಘ್ರದೊಳ್ ಯೋಗ್ಯನನ್ನರಸಿ ವೈವಾಹಮಂಗೈಸಿದಪೆ ನಿನಗೆ.

ಶರ್ಮಿಷ್ಠೆ:—(ಕಿವಿಗಳನ್ನು ಮುಚ್ಚಿಕೊಂಡು, ದುಃಖದಿಂದ) ಬೇಡ, ಬೇಡ, ಪ್ರಭೋ! ಬೇಡ,......ಮದುವೆಯಾ ಭಾಗ್ಯಮಂ ಕಳೆದಿತ್ತು...... ನಾನಿತ್ತ ತೊತ್ತಾಗಿ ಬಂದಿಹೆನು......ಮತ್ತೇಕೆ ಸಲ್ಲದಾ ಮಾತು? ಬೇಡ ಜೀಯ!......ಆಶ್ರಿತರ, (ಕುತೂಹಲ ಪೂರ್ಣ ಭಾವದಿಂದ) 'ಕಲ್ಪತರು'ವೆಂದು ನಿನ್ನಂ, ಕೊಂಡಾಡುತಿದೆ ಜನಂ. ಚಂದ್ರವಂಶದ ಮಹಾರಾಜನೀಂ, ಮಹಾನುಭಾವಂ......ನಿನ್ನ ಪಾದದೊಳಿದ್ದು ಬೇಡಿದರ ಮನದಿಷ್ಟಮಂ ಕೊಟ್ಟು ಕಾಯುತಿಹ ಕಲಿಯಂತೆ ನೀಂ.

ಯಯಾತಿ:—ದಾಸಿತನದಿಂ ಬಿಡುಗಡೆಯ ಆಸೆಯೇಂ?

ಶರ್ಮಿಷ್ಠೆ:—ಅದಲ್ಲ ಜೀಯಾ! ನಾಂ ಬೇಡುತಿಹುದು.

ಯಯಾತಿ:—(ಕರುಣೆಯಿಂದ) ಮತ್ತೇನ ನೀಂ ಬೇಡಿದಪೆ ಶರ್ಮಿಷ್ಠೆ!

ಶರ್ಮಿಷ್ಠೆ:—(ಪುನಹ ಮಂದಹಾಸಯುಕ್ತವಾಗಿ) ಬೇಡಿದೊಡೆ ನೀನಿತ್ತು ರಕ್ಷಿಪೆಯೇನು?

ಯಯಾತಿ:—ಹುಂ. ಹೇಳು......

ಶರ್ಮಿಷ್ಠೆ:—ದಯಾಮಯನೇ! ನನ್ನ ಕುಲಗೋತ್ರ ಶೀಲಂಗಳಂ ಮೇಣೆನ್ನ ದೀನತೆಯ ದುಃಸ್ಥಿತಿಯನೆಲ್ಲವಂ, ಬಲ್ಲೆ ನೀಂ......

ಯಯಾತಿ;—ಗೊತ್ತಿಹುದು.

ಶರ್ಮಿಷ್ಠೆ:—(ಮತ್ತೂ ಕುತೂಹಲದಿಂದ,) ಪ್ರಭೋ!......... ನನಗುಂ,......ನಿನ್ನ........ಮಕ್ಕಳ..... ಹಡೆವಾಸೆ......[ರಾಜನ ಮುಖವನ್ನು ನೋಡುವಳು.]

ಯಯಾತಿ:—(ಗಾಬರಿಯಿಂದ) ಏನು? ಏನನಾಡಿದೆ ಶರ್ಮಿಷ್ಠೆ!

ಶರ್ಮಿಷ್ಠೆ:—(ಧೃಡತೆಯಿಂದ ಅವನನ್ನು ನೋಡುತ್ತಾ) ಜೀಯಾ!.........ನನ್ನಾಸೆಯಾ 'ಕಡಲ' ಕಡೆಕಡೆದು "ಕೌಸ್ತುಭ"ವ ನೀಡೆಂದು ಬೇಡುತಿಹೆನು.

ಯಯಾತಿ:—ಅಯ್ಯೋ! (ದಿಙ್ಮೂಢನಾಗಿ)...ಆಗದಾಗದು,... ಶರ್ಮಿಷ್ಠೆ!......ಅಕೃತ್ಯಮಂ ನೆನಯದಿರು.

ಶರ್ಮಿಷ್ಠೆ:—ಸ್ವಾಮಿ!........ಭಯವೇನು?

ಯಯಾತಿ:—ನಿಜಕ್ಕೂ ಭಯವೆ.

ಶರ್ಮಿಷ್ಠೆ:—ಚಕ್ರೇಶ್ವರಂ ನೀನಾಗಿ ಭಯಪಡುವುದಾರ್ಗೆ?

ಯಯಾತಿ:—ಅದೇಕೋ ನನ್ನೆದೆಯು ಅಳುಕುತಿದೆ, ಶರ್ಮಿಷ್ಠೆ.

ಶರ್ಮಿಷ್ಠೆ:—ಪ್ರಭೋ! ಮಹಾರಾಣಿಯಾ ಭಯವೋ? ಮೇಣ್ 'ಧರ್ಮ'ದಾ ಭಯವೋ?

ಯಯಾತಿ:—'ಧರ್ಮ'ಮಂ ಕುರಿತಂಜುವೆಂ. ದೇವಯಾನೆಯಂ ವರಿಸಿ, ನಾಂ ಬರುವಾಗ ಪೂಜ್ಯನಾ ದೈತ್ಯಗುರುವಾಡಿಹನು. "ಶರ್ಮಿಷ್ಠೆಯಂ ಬಳಿಗೆ ಬರಗೊಡದಿರೆ"ಂದು.

ಶರ್ಮಿಷ್ಠೆ:—ಹೋ! ಅಂತು ನುಡಿದಿರ್ದನೇಂ?...,........ಅದಕಾಗಿ ಭಯವೆ? ಜೀಯ ದೈತ್ಯಕುಲಕೆಲ್ಲ ಗುರುವಾಗಿರ್ದೊಡೇಂ? ತನ್ನಣುಗಿಯಾ ಸುಖದ ಶಾಶ್ವತಕಾಗಿ, ನಿನ್ನೊಳಿಂತೊರೆದಿರ್ದನಾತಂ..........ಅದೋ ಅಂದು......ತನ್ನಸುತೆಗೆಲ್ಲರೋಲ್ (ವಿಷಾದ ಪೂರ್ವಕವಾಗಿ) ದೊರೆತಿರ್ದ ಸೌಭಾಗ್ಯಮಂ ಗುರುವಿನಾಣತಿಗಾಗಿ ಬಲಿಯಿತ್ತ, ನನ್ನಯ್ಯನಂ ನೆನೆ; ಮಗಳಾದ ನನ್ನಂ ಗುರುಸುತೆಗೆ ದಾಸಿಯಾಗಿತ್ತು ಕಳುಹುತಿತೆ, ವಿಧಿಯಂತೆ ನಿನ್ನಾಕೆಯಾ ಕಿರುಗಂಟಿನಾ ಮೂಟೆಯಂ ತಲೆಯೊಳಿಟ್ಟಾನು ಬೆನ್ನ ಹಿಂದೆಯೆ

ನಡೆಯುತಿರೆ, ಹನಿಗಣ್ಣಿನಿಂ ನಮ್ಮ ಜನಮೆಲ್ಲ, ಮತ್ತೆಮ್ಮ ಚರಿತ್ರಾರ್ಹ ಪಯಣಮಂ ನೋಡುತಿರೆ, ಕೈಯೆತ್ತಿ ನನ್ನಂ ತೋರಿಸುತೆ, ಸುರಿವ ಕಣ್ಣೀರ ಧಾರೆಯಿಂ ಶನ್ನ ಪಿತ ನಿನಗಾಗಿ ನುಡಿದಿರ್ದ ನುಡಿಗಳೇಂ ವಿಸ್ಮೃತಿಯ ಪಾತಾಳಕಿಳಿದಿರ್ಪುವೇ? ರಾಜೇಂದ್ರ! ನೀಂ, ಮರೆತೊಡೇಂ? ನನ್ನೆದೆಯು ಮರೆವಪುದೆ? ನಿನ್ನನೆನಹಿನ ರತ್ನಧಿಯನೀಂ ಹುಡುಕಿ ನೋಡು. "ಸೋತು ನಾಂ, ಸುತೆಯನೀಕೆಯಂ ದಾಸಿಯಾಗಿತ್ತುದಲ್ಲ. 'ಧರ್ಮ'ಮಂ ಪಾಲಿಸುವ ಮಗಳನಾಂ ಪಡೆದಿರ್ದ ನನ್ನ ಜೀವನದ ಗೆಲವಿನಲಿ, ಮತ್ತೀಕೆಯಂ ನಿನ್ನೆಡೆಗೆ ತೊತ್ತಾಗಿ ಕಳುಹುತಿರ್ಪೆ. 'ಧರ್ಮ'ಮಂ ಬಿಡದೆ ಪಾಲಿಪಳೀಕೆ ನನ್ನಣುಗಿ, ರಕ್ಷಣೆಗೆ ನೀನಿರ್ದು ಮತ್ತದೇ 'ಧರ್ಮ'ಮಂ ಕಾಯ್ದು ಕೊಡು" ಎಂದೊರೆದು ಕೈಮುಗಿದು ದಾನವೇಂದ್ರಂ ಬೇಡಿ ನುಡಿದಿರ್ದ ನುಡಿಯೆಲ್ಲ ಮೇಣ್ ಬರಡಾದುದೇ ಜೀಯ?

ಯಯಾತಿ:—ಅದನೂ, ನಾಂ ಮರೆತಿಲ್ಲ. ಆದೊಡೇಂ, ನೀನುಂ ನಿನ್ನಯ್ಯನಾಡಿದೋಲ್ 'ಧರ್ಮ'ಮಂ ಪಾಲಿಸುತಲಿಲ್ಲ. ಮದನಂಗೆ ಸೋತಿಂದು 'ಧರ್ಮ'ಮಂ ನೂಂಕುತಿರುವೆ.

ಶರ್ಮಿಷ್ಠೆ:—(ಗಂಭೀರತೆಯಿಂದ) ತಾಳ್ಮೆವೆತ್ತೆನ್ನ ಮಾತುಗಳನಾಲಿಪುದು ಜೀಯ, 'ಧರ್ಮ'ಮಂ ನಾನಿಂದು 'ಕಾಮ'ಕ್ಕೆ ಮಾರುತಿಲ್ಲ. 'ಧರ್ಮ' ಸಮ್ಮತಮಾಗಿ ಪ್ರೇಮಮೂರ್ತಿಯನರ್ಚಿಸುವೆನಾಂ. ತೊತ್ತಾಗಿ ಬಂದವಳು, ಪ್ರತ್ಯೇಕ ಸಂಸಾರಮಂ ಹೂಡುವರ್ಹತೆಯಿಂದೆ ಹೊರಗಾಗಿ ನಿಂದಿಹಳು. ಅವಳಿಗವಳೊಡೆಯರೇ ಸುಖ, ದುಃಖ, ಮೇಣ್, ಇಹಪರಕೆ ಕಾರಣರು. [ಕಾರುಣ್ಯ ಭಾವವನ್ನು ಗಂಭೀರತೆಯ ಜತೆಗೆ ಸೇರಿಸಿಕೊಂಡು] ದಾಸಿಯರನನುದಿನಂ ಕಷ್ಟದೊಳ್ ನೂಂಕಿ ಸೇವೆಯಂಗೊಂಡು ಬೇಕಾದುದಂ ನೀಡದಿರ್ದಪುದು ಒಡತಿತನಕುಚಿತಮಲ್ಲ. ಹಸಿವಿನಿಂ ಬಳಲಿರ್ಪ ದಾಸಿಯುಳ ಕೈಯ್ಯಿಂದೆ ಸೇವೆಯಂಗೊಂಡಪುದು 'ಧರ್ಮ'ಮಲ್ಲ; ಮತ್ತಂತೆಯೇ ದಾಸಿಯುಳ 'ದೀನತೆ'ಯ'ನಾರ್ತತೆ'ಯ, 'ಮನದಳಲ'ನೆಲ್ಲಮಂ, ದಿನದಿನಂ ಕೇಳಿ ಪೂರೈಸಿ ಕೊಟ್ಟಪುದೆ 'ಧರ್ಮ'ಂ. ಒಡತಿತನ ಧರ್ಮದೊಳ್ ನಿನ್ನಾಕೆ ತಪ್ಪಿದೊಡೆ ಹೊಣೆಗಾರನೀನಲ್ಲಮೇಂ? ದಾಸಿಯುರ್ಗೇನಿಹುದು ಲೋಕದೊಳ್, ಪಾಲಕರೆ ಬೇಕಾದುದನ್ನಿತ್ತು ರಕ್ಷಿಪುದು 'ಧರ್ಮ'ಂ......"ಧರ್ಮ' ವಿಧಿ ನಿಯಮಂಗಳಂ ಮುಂದಿಟ್ಟು ನಮ್ಮ ಗುರು

ನಿನಗಾತ್ಮಪುತ್ರಿಯುಂ ಧಾರೆಯನ್ನೆರೆದಿತ್ತ ಸತಿಯಾಗಿ; ನನ್ನಯ್ಯನೆನ್ನನಿತ್ತಂ ನಿನ್ನಾಕೆಯಾ 'ದಾಸಿ'ಯಾಗಿ. ನೀನಾಕೆಗೆಂತು ವಲ್ಲಭನೋ, ನನಗಾಕೆ ಅಂತೆಯೇ ಒಡತಿ. 'ಧರ್ಮ'ದೊಳ್ ಒಡತಿಗಾವನು ಪತಿಯೋ 'ದಾಸಿ' ಗಾತನೆ ಸ್ವಾಮಿ; ಮೇಣ್ ಆಕೆಯಾ ಮಕ್ಕಳಿಂಗಯ್ಯ. ಪ್ರಭೊ! ನಿನಗಿ ದೆಲ್ಲಮಂ ತಿಳಿಯಹೇಳಲಾನೆಲ್ಲಿ? ಮರವೆಯಾಗಿರ್ದುದಂ.........ಚಿತ್ತದಾ ನೆನಪಿಗಿತ್ತಿಹೆನಷ್ಟೆ. (ಕುತೂಹಲಪೂರ್ಣದೃಷ್ಟಿಯಿಂದ ಆತನನ್ನೆ ನೋಡುವಳು)

ಯಯಾತಿ:–(ಔಡುಗಚ್ಚಿ) ಹುಂ೦೦೦! ಧರ್ಮ ಸೂಕ್ಷ್ಮಮತಿಗಹನಂ ಹುಂ! (ಗಗನವನ್ನು ನೋಡುವಂತೆ ಮೇಲೆ ನೋಡುವನು.)

ಶರ್ಮಿಷ್ಠೆ:—ಪ್ರಭೋ, ಧರ್ಮಸಮ್ಮತವಲ್ಲದಿಹ ಬಯಕೆಯುಂ ಬಯಸೆನಾನೆಂದಿಗುಂ. ಪೈತೃಕದ ದಿನದಂದು, ದಾಸದಾಸಿಯರನೆಲ್ಲರಂ ನೆನನೆನೆದು ಪಿಂಡಮನ್ನಿಟ್ಟಪುದು ಶಾಸ್ತ್ರೀಯ ವಿಧಿಯಲ್ತೆ? ಜೀಯ! ಪಾರ ಲೌಕಿಕ ಕ್ರಿಯೆಯೊಳುಂ, ನಂಬಿರ್ಪ ದಾಸಿಯರ ಕುರಿತಾದ ವಿಧಿಯಿರ್ದ ಮೇಲಿನ್ನು, ಲೌಕಿಕದಿ ಬಿಟ್ಟಪುದು ನ್ಯಾಯಮೇ ಮೇಣ್ 'ಧರ್ಮ'ಮೇ? (ಅವನನ್ನೇ ದಿಟ್ಟಿಸಿ ನೋಡುವಳು.)

ಯಯಾತಿ:—[ಆಕೆಯ ಮುಖವನ್ನೊಮ್ಮೆ, ನೆಲವನ್ನೊಮ್ಮೆ ನೋಡುತ್ತಾ, ಸಿಕ್ಕಿಬಿದ್ದವನಂತೆ ತಳಮಳಿಸುವನು. ಮೌನ. ಕೈಹಿಚುಕಿ ಕೊಳ್ಳುವನು.]

ಶರ್ಮಿಷ್ಠೆ:–[ಗಂಭೀರತೆಯಿಂದ]'ದಾಸಿ'ಯಾದೊಡದೇನು?'ದೊರೆ' ಯಾದೊಡೇನು?...ಲೋಕದೊಳ್ 'ಧರ್ಮ'ಮೆಲ್ಲರಿಗೊಂದೆ. 'ಧರ್ಮ'ದಾ ದೃಷ್ಟಿಯೊಳ್ ಲೋಕದಾ ಜನಮೆಲ್ಲಮೊಂದೆ. [ಕರುಣೆಯ ಭಾವದಿಂದ] ಮಹಾ ಪ್ರಭೋ!........'ಧರ್ಮ'ಮೊಂದಲ್ಲದೊಡೆ......ನಾನಿಂತು 'ದಾಸಿ' ಯಾಗುತೆ ಬಹಳಲ್ಲ. 'ಧರ್ಮ'ಮೊಲ್ಲದೊಡೆ......ನಿನ್ನೆಡೆಯೊಳಾನಿಂತು ಬೇಡುವವಳಲ್ಲ. [ಕುತೂಹಲ ಪೂರ್ಣಭಾವದಿಂದ ಅವನನ್ನು ನೋಡುತ್ತಾ] ಸಾಮ್ರಾಜ್ಯದೀ ಪಟ್ಟಮಂ......ಮಹಾರಾಜ "ನಹುಷ"ಂಗೆ ಮಗನಾಗಿ 'ಧರ್ಮ'ದಿಂ ನೀನೆಂತು ಪಡೆದಿಹೆಯೋ?......ಮತ್ತಂತೆಯೇ "ನನ್ನೊಡ ತಿಯಾ ಪತಿ"ಯಾಗಿ, 'ಧರ್ಮ'ದಿಂ ನನ್ನಾಸೆಯುಂ ಪೂರೈಸು. [ಧೃಡತೆ

ಯಿಂದ]......ಜೀಯಾ!......ನಿನ್ನೊಳಾಂ... ಬೇಡಿ...ನುಡಿದಿರ್ದುದೆಲ್ಲಂ 'ಧರ್ಮ' ಸಮ್ಮತವೆಂದೆನ್ನ ಬಗೆ...ನೆಚ್ಚಿಹುದು. ತಪ್ಪಾಗಿ ನಾಂ ನುಡಿದಿರ್ದೊಡಿನ್ನೇನು?......'ಧರ್ಮ'ಮಂ ರಕ್ಷಿಸಲ್ 'ಧರ್ಮ' ದ್ರೋಹಿಗಳ ಕಡಿಕಡಿದು, ನಿನ್ನ ಶಾಸನದ ಬಲದಿಂದೆ 'ಧರ್ಮ'ಮಂ ಪಾಲಿಸುವನೀಂ ಪಡೆದಿರ್ಪ ಪಟ್ಟದಧಿಕಾರದಾ ಕಠಿಣತರ 'ಕರವಾಲ'ದಿಂ, ತಳುವದೀಕ್ಷಣವೆನ್ನ ತಲೆಯನೇ ಕುಟ್ಟಿ ಕಳೆ......[ವಿನೀತ ಭಾವದಿಂದ] 'ಧರ್ಮ' ದೃಷ್ಟಿಯೊಳೆನ್ನ ಬೇಡಿಕೆಗಳೆಲ್ಲಂ, ಶಾಶ್ವತಕೆ ಸರಿಯೆಂದು ತೋರಿದೊಡೆ... [ಮಂಡಿಯನ್ನೂರಿ ಕೈಮುಗಿದು] ಹೇ ಸ್ವಾಮಿ! [ಕರುಣಾಜನಕ ಕುತೂಹಲದಿಂದ] ಅನುಪಮದ...ನಿನ್ನೋಜತೇಜಂಗಳಾ ಚಂದ್ರಿಕೆಯನಿದೋ... ಹಿರಿಯಾಸೆ 'ಬಡಬ'ನಿಂ ಬೆಂದು ಬೇಗುದಿಗೊಂಡ.........ನನ್ನೊಡಲ ಸಾಗರಕೆ ಬೀರು! ಸಂತಸದ ಪೆರ್ದೆರೆಯನೆಬ್ಬಿಸುತೆ, ನಿನ್ನೊಲ್ಮೆಯಂ ಸಾರು!!......ಮತ್ತೆಮ್ಮ 'ಧರ್ಮ'ದಯ ಜೀವನದಿ,......ಬಾಳಕಡಲಿನ ಭರತಮಂ ಜಗಕೆಲ್ಲ ತೋರು!!! ನೊಂದೆದೆಗೆ ಶಾಂತಿಯಂ...ಬೀರು!!!! [ರಾಜನ ಪಾದಗಳನ್ನು ಹಿಡಿದುಕೊಂಡು, ನಮಸ್ಕಾರ ಮಾಡಿ, ಪಾದಗಳನ್ನು ಬಿಡದೆ ಅವನ ಮುಖವನ್ನು ನೋಡಿ ಪುನಹ ಪುನಹ, ಕಾಲೆಡೆಯಲ್ಲಿ ಬಿದ್ದು ಹೊರಳುವಳು. ಯಯಾತಿಯು ಮತ್ತಾವುದೋ ಸ್ವಪ್ನ ರಾಜ್ಯದಲ್ಲಿದ್ದಂತೆ ಮಂಕನಾಗಿದ್ದವನು, ಶರ್ಮಿಷ್ಟೆಯ ಕರಸ್ಪರ್ಶದಿಂದ, ವಿದ್ಯುತ್ಸಂಚಾರವಾದಂತಾಗಿ, ಅವಳನ್ನೊಮ್ಮೆ, ಬಾಹ್ಯವನ್ನೊಮ್ಮೆ ನೋಡುತ್ತ ನೋಡುತ್ತ ಪಶ್ಚಾತ್ತಾಪಪಡುವಂತೆ ಎದ್ದು ನಡುಗುತ್ತ.]

ಯಯಾತಿ!—ಧ......ರ್......ಮ!! ಧ......ರ್......ಮ!! 'ಧರ್ಮ'ದಾ......'ದಾಸಿ...ದಾಸಿ'...ಬಾ! ಬಾ!! [ಎರಡು ಕೈಗಳಿಂದಲೂ ಮೆಲ್ಲನೇ ಹಿಡಿದೆಬ್ಬಿಸಿ ತಳ್ಕಿಸುವನು.] (ಪರದೆ ಬೀಳುವುದು)

೫ನೇ ದೃಶ್ಯ

[ಯಯಾತಿಯ ಅರಮನೆಯ ಒಂದು ಭಾಗದಲ್ಲಿ, ದೇವಯಾನೆ ಸಿಟ್ಟಿನ ಭರದಲ್ಲಿರುವಳು ಶರ್ಮಿಷ್ಟೆಯೂ, ಅಪರಾಧಿನಿಯಂತೆ ನಿಂತಿರುವಳು.]

ದೇವಯಾನೆ:—ದಿಟವಾಗಿ ನುಡಿ ನೀನು ಶರ್ಮಿಷ್ಟೆ!......ದುರಿತವನ್ನೆನೃತದಿಂ ಮುಚ್ಚಿಟ್ಟು......ನನ್ನ ಕಣ್ಣಿಗೆ ಮಣ್ಣೆರಚಿದಪೆಯೇನು?

ಶರ್ಮಿಷ್ಠೆ:—[ನಸುಕೋಪವಿದ್ದರೂ ವಿನಯದಿಂದ] ದೇವಿ!...... ನಾನಿದುತನಕ ದುರಿತಮಂ ಗೈದುದಿಲ್ಲ, ಸತ್ಯಮಲ್ಲದೆ ಮತ್ತೇನನುಂ ನುಡಿದುದಿಲ್ಲ.

ದೇವಯಾನೆ:—[ಗದರಿಸುತ್ತಾ] ಇಲ್ಲಾ! ಇಲ್ಲಾ!!...ನಾನರಿತಿಲ್ಲ ವೆಂದೆಣಿಸಿರ್ಪೆಯೇನು?

ಶರ್ಮಿಷ್ಠೆ:—[ಗಂಭೀರವಾಗಿ] ತಪ್ಪನಾವುದಂ ಗೈದಿಲ್ಲವೆಂದೆ... ಮತ್ತೆ ನೀನರಿವುದೆಂತೋ......ನಾನರಿಯೆ.

ದೇವಯಾನೆ:—ನೀನರಿತಿಲ್ಲ...ಬಲ್ಲೆನಾಂ......ಶರ್ಮಿಷ್ಠೆ!...... ಮಕ್ಕಳಿರ್ಪರು ನಿನಗೆ ಒಂದಲ್ಲ, ಎರಡಲ್ಲ......ಮೂರು.

ಶರ್ಮಿಷ್ಠೆ:—[ಕಾರುಣ್ಯ, ಗಂಭೀರ, ನಸುತಿರಸ್ಕಾರದ ಭಾವಗಳಿಂದ] ಮಕ್ಕಳಿರ್ಪುದು ತಪ್ಪೆ ತಾಯಿ!...ಹುಟ್ಟಿದಾಗಲೆ ತಾಯಿತನಮಂ ಪಡೆದು ನಾವೆಲ್ಲ ಹೆಣ್ಣಾಗಿ ಹುಟ್ಟಿಹೆವು...ಮತ್ತೇನು?...ಪ್ರಕೃತಿಯಿಂ 'ಮಾತೃತ್ವ' ದಧಿಕಾರವಮಂ ಪಡೆದು "ಮಕ್ಕಳಂ ಪಡೆವಾಸೆ"ಯಿಲ್ಲಮಾರ್ಗೆ? ಜೀವನದ ಕಷ್ಟವೇನೆಂದು ಕಂಡರಿಯದಾ ಮಹಾರಾಣಿ ನೀಂ...ಸುಖದ ಕನಸನೂ ಕಾಣದಿಹ......'ದಾಸಿ' ನಾಂ......ಬೆಸಲೆಯಃಹಾರಿಬಮುದು ದುಃಸ್ಸಾಧ್ಯ ವೆಂಬರಿವಿರ್ದೊಡಂ, ಮುಂದಣಾಸೆಯಬಲದಿ, ಮತ್ತದಂ ಲೆಕ್ಕಿಸದೆ ಮಕ್ಕಳಂ ಹಡೆದು ಪಡೆವಾಸೆ ನನಗಾದೊಡೇಂ? ನಿನಗಾದೊಡೇಂ?...... ನಮಗೆಲ್ಲವೊಂದೆ......ನೀನುಂ ಎರಡು ಮಕ್ಕಳ ತಾಯಿ.

ದೇವಯಾನೆ:—ನೀತಿಯೊಳ್ ತಪ್ಪಿರ್ದೊಡಂ, ಮಾತಿನಲಿ ಬಣ್ಣ ಮಂ ಬಳಿಯುತಿಹೆ, ಶರ್ಮಿಷ್ಠೆ!...ನೀನಾರ ಮುಂದಿರ್ಪೆಯೆಂಬುದಂ... ಮೇಣಾರ ಹೊಂದಿರ್ಪೆಯೆಂಬುದಂ ಮರೆದಿರ್ಪೆಯೇಂ? ಛೀ! ತೊತ್ತೆ...... ಮೂರಲ್ಲ ಮುಂದೆ...ನೂರು ಮಕ್ಕಳ ಪಡೆ ನೀನು. ನನಗೇನು?...... ಇಂದಿನೀವರೆಗೆನ್ನ ದಾಸಿ ನೀಂ......ಅದಕಾಗಿ ನಿನ್ನನಾಂ ವಿಚಾರಿಸಿದಪೆ... ಸತ್ಯವಾದಿನಿಯಂತೆ ನೀಂ......ನೋಡಿದಪೆ ನಿನ್ನ ಸತ್ಯತೆಯಮೇರುವಂ ಆರು?......ಪೇಳ್....ನೀಂ ಪಡೆದ...ಈ ಮೂರು ಮಕ್ಕಳ ತಂದೆ?

ಶರ್ಮಿಷ್ಠೆ:—ಅದಕಾಗಿಯೇಂ ನೀನೆನ್ನ ಜರೆವಪುದು? ಜರೆಯದಿರು ದೇವಿ! [ಕಾರುಣ್ಯ ಮಿಶ್ರಭಾವದಿಂದ] ನಾನಿನಗೆ ಆಜೀವ ದಾಸಿ. ನಿನ್ನ ಗೌರವಕೆ ಕುಂದಪ್ಪಕಾರ್ಯಂಗಳಂ ನಾನೆಂದಿಗುಂ ಗೈದಿಲ್ಲ. ಮುಂದೆಯುಂ

ಗೈವಾಳೆಯಲ್ಲ. ಎಂತಾದೊಡಂ, ನನ್ನ ಮಕ್ಕಳು......ಮುಂದೆ ಸಮಾಜದೊಳ್......ತೊತ್ತಿನಾ ಮಕ್ಕಳಿವರೆಂಬ ಕೀಳ್ಮೆಯೊಳೆ ಬಾಳ್ವೆಯಂ ಬಾಳುತಿಹುವಲ್ತೆ? ಮತ್ತೇಕೆ ನಾಂ ಅವರಯ್ಯನಾಪೆಸರ ಪೇಳ್ದವನಜಸವ ಮಸುಳಿಪುದು?

ದೇವಯಾನೆ:—ದುಷ್ಟೆ!......ನಿನ್ನ ನೀತಿಯಂ ಕೆಡಿಸಿಕೊಂಡಿರ್ಪೆ ನೀಂ...ಅದರಿಂದೆ ನೀನೊಲ್ದವರ ಪೆಸರನಡಗಿಸುತಿರ್ಪೆ......ಆರಾದರೇನುಂಟು? ಪೇಳೆನಗೆ? ನಿನ್ನ ಮಕ್ಕಳು ಮುಂದೆ ಬಾಳ್ದರೇಂ? ಸತ್ತರೇಂ?

ಶರ್ಮಿಷ್ಠೆ:—[ಸ್ವಲ್ಪ ಸಿಟ್ಟಿನಿಂದ] ಹಾ! ತಡೆ!......ಮಹಾರಾಣಿ ತಡೆದುಹಿಡಿ ನಿನ್ನರಸನೆಯಂ......ನೀನಾರನಿಂದಿಸುತಿರ್ಪೆ? ಮೇಣ್ ಆರ ನಿಂದಿಸಲ್ ಯೋಗ್ಯಳಿಹೆ? ನಾನೆನ್ನ ನೀತಿಯೊಳೆ ಮೇಣ್ 'ಧರ್ಮ'ದೊಳೆ ನಿರತಳಿರ್ಪೆ...ನಿನ್ನವೋಲ್ ಕಚನ......[ಔಡುಗಚ್ಚಿ]...ದೇವಿ! [ವಿನಯದಿಂದ] ಕ್ಷಮಿಸೆನ್ನ! ನಿನ್ನನಾಂ ಧಿಕ್ಕರಿಸಿ ನುಡಿದುದಕೆ...ದಯಮಿತ್ತು...ಕೇಳದಿರು 'ನನ್ನೊಲ್ಮೆಯಾ ಸಾಗರದ ಚಂದ್ರನಂ'.

ದೇವಯಾನೆ:—ಪಾಪಿಣಿಯೆ! ಮಿತಿಮೀರಿ ಸಾಗಿಹುದು ನಿನ್ನ ಔದ್ಧತ್ಯಮಿಂದು. ನನ್ನ ಯೋಗ್ಯತೆಯ ಕುರಿತು ಹಳಿಯುತಿಹೆ......ಭ್ರಷ್ಟೆ!........ತೊತ್ತಿಗೆನಿತರ ಹೆಮ್ಮೆ? [ಸಿಟ್ಟಿನಿಂದ ಶರ್ಮಿಷ್ಠೆಯನ್ನು ಹರಿದು ತಿನ್ನುವಂತೆ ದುರುಗುಟ್ಟಿ ನೋಡಿ] ಹೇಳು! ನನ್ನಾಜ್ಞೆ......ಅಲ್ಲದಿರೆ ತೊತ್ತುತನಮಂ ಬಿಟ್ಟೆನೆಂದೊದರಿ ನಡೆ......ನನ್ನಯ್ಯ......ನಿನ್ನಯ್ಯನಂ ವಿಚಾರಿಸಿದಪ ಮತ್ತೆ......

ಶರ್ಮಿಷ್ಠೆ:—[ಸ್ವಗತ; ವಿಷಾದದಿಂದ] ಅಯ್ಯೋ!......ಗೋಪ್ಯಮಾಗಿಟ್ಟಪುದೆ ಲೇಸೆಂದು ಮಹಾರಾಜನಿಚ್ಛೆ......ಸತ್ಯಮಂ ನುಡಿಯದೊಡೆ......ದೇವಯಾನೆಯ ಆಜ್ಞೆ......ತಪ್ಪಿದೊಡೆ...ನನ್ನಯ್ಯನೊಳ್ ದೂರು ಪೋದಪುದು...ಅಯ್ಯೋ!...ಮತ್ತೊಮ್ಮೆ...ನನ್ನ ಪಿತ ಕಷ್ಟದೊಳ್ ಬಿದ್ದಪನು......ಹಾಯ್!...ವಿಧಿಯೇ! [ಮೌನದಿಂದ ಸುರಿದ ಕಣ್ಣೀರನ್ನು ತನ್ನ ಸೆರಗಿನಿಂದುಜ್ಜಿಕೊಳ್ಳುವಳು.]

ದೇವಯಾನೆ:—ಹುಂ! ಹೇಳು......ಜಾರಿಣಿಯೆ!

ಶರ್ಮಿಷ್ಠೆ:—[ಕಿವಿಗಳನ್ನು ಮುಚ್ಚಿಕೊಂಡು ಸಂತಾಪದಿಂದ] ಅಯ್ಯೋ!......ಅಯ್ಯೋ!

ದೇವಯಾನೆ:—ಹೇಳದಿರೆ...[ಕೊರಳಿಗೆ ಕೈಯ್ಯಿಕ್ಕಿ ನೂಕುವಳು, ಶರ್ಮಿಷ್ಠೆಯು ಬಿದ್ದುಹೋಗುವಳು.]

ಶರ್ಮಿಷ್ಠೆ:—ಹಾಯ್!...ಹಾಯ್......[ಏಳಲು ಪ್ರಯತ್ನಿಸುವಾಗ ದೇವಯಾನೆಯು ಒದೆಯುವಳು] ಅಯ್ಯೋ!...ಅಯ್ಯೋ!! [ಅಷ್ಟರಲ್ಲಿ ಹಠತ್ತಾಗಿ ಮಹಾರಾಜ ಯಯಾತಿಯು ಬರುವನು ಈ ಅನರ್ಥವನ್ನು ಕಣ್ಣಾರೆ ನೋಡುವನು.]

ಯಯಾತಿ:—ಏನು? ಏನಿದು? ದೇವಯಾನೆ?! ನೀನೇ ಇನಿತೊಂದು ನಿಷ್ಠುರಳಾಗಿ ವರ್ತಿಸುತಿರ್ಪೆ? ಛೆ! [ದೇವಯಾನೆಯನ್ನು ತನ್ನೆಡೆಗೆ ಸೆಳೆದುಕೊಂಡು] ನಿನಗಿನ್ನೂ ತಾಳ್ಮೆ ಬಂದಿಲ್ಲವೇಂ?

ದೇವಯಾನೆ:—[ರಾಜನ ಕೈಯ್ಯಿಂದ ಉರುಬಿಕೊಂಡು] ಇಲ್ಲ! ನಾನು ರಾಕ್ಷಸಿ......ದಯವಿಲ್ಲ...ಇಲ್ಲ...ದಾಕ್ಷಿಣ್ಯವೆನಗಿಲ್ಲ......

[ರಾಜನು ಆಕೆಯನ್ನು ಪ್ರಸನ್ನೀಕರಿಸುವುದಕ್ಕಾಗಿ ಹತ್ತಿರ ಹತ್ತಿರ ಹೋಗಿ ಅವಳ ಭುಜಗಳ ಮೇಲೆ ಕೈಹಾಕುವನು. ಆಕೆಯು ದರ್ಪದಿಂದ ಕೊಡಹಿಕೊಳ್ಳುವಳು. ಇಷ್ಟರಲ್ಲಿ ಶರ್ಮಿಷ್ಠೆಯು ಸಾವರಿಸಿಕೊಂಡು ನಿಲ್ಲುವಳು. ಕ್ರೋಧ, ಸಂತಾಪಗಳೊಟ್ಟಾದ ಭಾವದಿಂದ ನೆಲವನ್ನೂ ಗಗನವನ್ನೂ ನೋಡುತ್ತಾ ಸಂಕಟಪಡುವಳು.]

ದೇವಯಾನೆ:-ಹುಂ! ಹೇಳು! ಹೇಳು!! ಶರ್ಮಿಷ್ಠೆ! ಬೇಗ ನುಡಿ!!!

ಯಯಾತಿ: — ದೇವಯಾನೆ! ಏನು ಮಾಡಿದಳೀಕೆ?

ದೇವಯಾನೆ:—ನನ್ನ... ದಾಸಿಯೊಳ್... ನಾಂ...ಕೇಳ್ದಪುದು. [ಶರ್ಮಿಷ್ಠೆಯ ಕಡೆಗೆ ಭರದಿಂದ ನುಗ್ಗಿ] ಹೇಳು! ಹುಂ! ಹೇಳು ನಿನ್ನ ಬೇಟದ ವಿಟನದಾರ್......ಹೇಳು. [ಶರ್ಮಿಷ್ಠೆಯ ಮುಂದಲೆಯನ್ನು ಹಿಡಿದು ಜಗ್ಗಲು ಮುಂದಾಗುವಳು. ಶರ್ಮಿಷ್ಠೆಯು ಸಿಡಿದು ದೂರ ನಿಲ್ಲುವಳು. ರಾಜನು ದೇವಯಾನೆಯನ್ನು ತನ್ನೆಡೆ ಹಿಡಿದೆಳೆಯುವನು· ಅವಳು ರಾಜನ ಮೈಮೇಲೆ ಆಧರಿಸಿದಂತಾಗಲು ಸಟಕ್ಕನೆ ಸರಿದು ದೂರ ನಿಲ್ಲುವಳು. ಅರಸನು ಕಿಂ ಕರ್ತವ್ಯಮೂಢನಾಗಿ ನಿಲ್ಲುವನು.]

ಶರ್ಮಿಷ್ಠೆ:—ದೇವಿ! ಅವಾಚ್ಯವನ್ನಾಡದಿರು. (ಕಣ್ಣೊರಸಿಕೊಳ್ಳುವಳು.)

ದೇವಯಾನೆ:—ಮತ್ತೇಕೆ ನೀನದಂ ಬಚ್ಚಿಡುವೆ? ಹೇಳು.

ಶರ್ಮಿಷ್ಠೆ:-[ನಿಟ್ಟುಸಿರನ್ನೆಳೆಯುತ್ತಾ ಮೌನದಿಂದ ಯೋಚಿಸುವಳು]

ದೇವಯಾನೆ:— ಶರ್ಮಿಷ್ಠೆ!.........[ಮತ್ತೂ ಮುಂದರಿಸಲು ಶರ್ಮಿಷ್ಠೆ ಹಿಂದೆ ಸರಿಯುವಳು, ರಾಜನು ದೇವಯಾನೆಯನ್ನು ಪುನಃ ಈಚೆಗೆ ಜಗ್ಗುವನು. ದೇವಯಾನೆಯು ಉರುಬಿಕೊಳ್ಳುವಳು.]

ಶರ್ಮಿಷ್ಠೆ:—ತಡೆ!... ..ದುಡುಕದಿರು......ಮಹಾರಾಣಿ ನೀಂ.

ದೇವಯಾನೆ:—ನನ್ನ ನಾಂ......ಕೇಳ್ವುದಲ್ಲ......ನಿನ್ನ ಮಕ್ಕಳ ತಂದೆಯಂ. [ಯಯಾತಿಯು ಹಣೆಯ ಮೇಲೆ ಕೈಯಿಟ್ಟು, ಅಲ್ಲಿಯಿದ್ದ ಪೀಠದಲ್ಲಿ ಕುಳಿತುಕೊಂಡು ನೆಲವನ್ನು ನೋಡುವನು.]

ಶರ್ಮಿಷ್ಠೆ:-ನನ್ನ ಮಕ್ಕಳ ತಂದೆಯೇ?......ನಿನ್ನ ಮಕ್ಕಳ...... ತಂದೆ?........

ದೇವಯಾನೆ:—ನನ್ನ ಸಹನೆ ಮೀರುತಿದೆ ಶರ್ಮಿಷ್ಠೆ......

ಶರ್ಮಿಷ್ಠೆ:—(ಗಂಭೀರ, ಸಂತಾಪ ಭಾವದಿಂದ) ದೇವಯಾನೆ! ನನಗುಂ ಸಹನೆ ಮೀರುತಿದೆ.........ನೀನಾಡಿ ನುಡಿದಿರ್ದ ನುಡಿಗಳೊಂದೊಂದೆ......ಶೂಲದೋಲ್ ನನ್ನೆದೆಯನಿರಿಯುತಿಹವು. ಮತ್ತಲ್ಲೆ ಕೂರಲಗಿನೋಲ್ ಕೊರೆಯುತಿಹವು.........ಪಾಳ್ಗಜ್ಜವೇನನುಂ ಗೈದುದಿಲ್ಲೆಂದು ನಿನ್ನೊಳಾಂ ಪೇಳಿರ್ದೊಡಂ...... ನನ್ನ ನೀಂ ಹಳಿಯುತಿರ್ಪೆ.... ನೋಡಿದೋ [ರಾಜನನ್ನು ತೋರಿಸುತ್ತಾ ಕಾರುಣ್ಯ ಭಾವದಿಂದ] ನಿನ್ನಂ ಕೈವಿಡಿದು ಮಹಾರಾಣಿ ಪದವಿಯಂ ನಿನಗಿತ್ತು ಮನ್ನಿಸಿದ.........ನಿನ್ನ ಮಕ್ಕಳ ತಾತನಿಹನಿಲ್ಲಿ. ಮತ್ತಾತನೇ......ನನ್ನ ಮಕ್ಕಳ ಪಿತಂ......

ದೇವಯಾನೆ:—(ರಾಜನ ಮುಖವನ್ನು ನೋಡಿ ತಲೆಯನ್ನಾಡಿಸುತ್ತಾ ಸಿಟ್ಟಿನಲ್ಲಿ) ಏನು! ಮಹಾರಾಜನಿಂ, ಮಹಾರಾಜನಿಂ ಸಂತತಿಯ ಪಡೆದಿರ್ಪೆಯೇಂ?......ನೀನಂದು ಮೊದಲಸಲ ಗರ್ಭಮಂ ತಾಳ್ದಂದು... ಪೇಳ್ದುದೇಂ?......"ಪೂಜ್ಯನಾದೋರ್ವ ಋಷಿಯಿಂದೆ, ಗರ್ಭಮಂ ಪಡೆದಿರ್ಪೆ"ನೆಂದಲ್ತೆ?......ಇಂದೀಗ......ಮಹಾ...ರಾಜನಿಂ...... ನಾಳೆ?

ಶರ್ಮಿಷ್ಠೆ:—(ಗಂಭೀರತೆಯಿಂದ) ದೇವಿ! ನಿನ್ನರಸನೀ ಮಹಾರಾಜನೀತಂ ಸಕಲ ಗುಣಗಣ ಮಂಡಿತಂ, ಧರ್ಮನಿರತಂ, ಸಾಧುಶ್ರೇಷ್ಠಂ, ಶೌಚ, ತಪ, ದಾನ, ಆರ್ಜವಗಳಿಂ, ಮೇಣ್ ಅತಿಶಯದ ಜ್ಞಾನ, ನಿಯಮಂಗಳಿಂ, ರಾಜ ಋಷಿಯಾಗಿರ್ಪನಂ. 'ಧರ್ಮ'ದಿಂ ನಾನಿನ್ನ 'ದಾಸಿ',

ದಾಸಿಯಾಗಿರ್ಪೆನಗೆ ನಿನ್ನ ಪತಿಯೇ 'ಧರ್ಮ'ದಿಂ 'ಪತಿ'ಯು. ಮತ್ತದೇ 'ಧರ್ಮ'ಮಂ ಪಾಲಿಸುತೆ ಸಿದ್ಧಿಯಂ ಪಡೆದಂತೆ, ನಿನ್ನರಸನಿಂ ನಿನ್ನವೋಲ್ ಮಕ್ಕಳಂ ಪಡೆದಿಹೆನು. ಹಳಿಯದಿರ್ ನನ್ನನಂತೆಯೇ ನನ್ನ ನೀತಿಯುಂ ಮೇಣ್ 'ಧರ್ಮ'ಮಂ. [ರಾಜನು ಇಬ್ಬರನ್ನೂ ಮಿಳ್ಮಿಳನೆ ನೋಡುತ್ತಾ ಇರಲು, ದೇವಯಾನೆಯು ಕೋಪದಿಂದಲೂ, ಶೋಕ ತಾಪಗಳಿಂದಲೂ ಪೀಡಿಸಲ್ಪಟ್ಟು]

ದೇವಯಾನೆ:— ಅಯ್ಯೋ! ನನ್ನ ಪ್ರಾರಬ್ಧಮೇ!......ಶೀತಳದ ಚಂದನದಿ ಕಾಳುರಿಯು ಹುದುಗಿರ್ಪುದೇ!......ಹಿಮಜಲದಿ......... ನಂಜಿರ್ಪುದೇ?......ಹಾಯ್...ಮಹಾರಾಜ! ಹೂವೆಂದು ಹಿಡಿದುದಾಂ ಹಾವಾಯ್ತು......ಮೊಗನೋಡಿ ಹಸುವೆಂದು........ ನಂಬಿರ್ದುದದು... ಕಾಡಿನಾ ಹುಲಿಯಾಯ್ತು. ಅಯ್ಯೋ! ....ಕ್ಷತ್ರಿಯನಾಗಿರ್ದೊಡಂ, ನಿನ್ನ ಸದ್ಧರ್ಮ, ಕುಲ, ಶೀಲ, ಜ್ಞಾನಂಗಳಂ ಕೇಳಿ, ನಂಬಿರ್ದ ನನ್ನಯ್ಯ... ಉತ್ತಮೋತ್ತಮ......ಬ್ರಾಹ್ಮ ವಿಧಿಯಿಂದೆ....... ಧಾರೆಯನ್ನೆರೆದೆನ್ನ... ನಿನಗಿತ್ತು......ವೈವಾಹಮಂ ಗೈದಿರ್ದನಂದು......ನೀನುಮಂತೆಯೇ... "ಧರ್ಮ, ಪ್ರಜಾ ಸಂಪದದ ಸಿದ್ಧಿಗೆ"ಂದೆನ್ನ ಕೈಯ್ಯಂ ಪಿಡಿದು......"ನಾತಿ ಚರಾಮಿ" ಎಂದೆಲ್ಲ ಬಂಧುಗಳ ಮುಂದೆ,.......ಭೂಮಿಯಂ ಮುಟ್ಟಿ,....... ನೆಲನನಗ್ನಿಯಂ, ತುಂಬಿರ್ದ ಸಭೆಯನುಂ ಸಾಕ್ಷಿಯಿತ್ತೆನ್ನ ನಂಬಿಸಿದೆ. ಮತ್ತೀಗ......ನಾನರಿಯದೇ.........ನನ್ನ ದಾಸಿಯನ್ನೊಲ್ದು......... ಅಯ್ಯೋ!.........ನನ್ನ ಬಾಳಂ ಮುಳುಗಿಸಿದೆ. ಹಾಯ್!......... ಹಾಯ್!.......

ಶರ್ಮಿಷ್ಠೆ:—[ಗಂಭೀರ, ಕಾರುಣ್ಯ ಭಾವದಿಂದ] ದೇವಯಾನೆ! ನನಗಾಗಿ ನೀನೇಕೆ ನಿನ್ನರಸನಂ, ಈ ಮಹಾರಾಜನಂ ನೀಕರಿಸಿ ನುಡಿಯುತಿರ್ಪೆ?......ನಿನಗಾಗಿ, ನಿನ್ನ ಛಲಕಾಗಿ, ನಿನ್ನ ಮೇಲಿನ ವಾತ್ಸಲ್ಯದಿಂ, ಧರ್ಮಜ್ಞನಾ ದೈತ್ಯಗುರು, ವರ್ಣಸಾಂಕರ್ಯಮುಪ್ಪುದಂ ಕಡೆಗಣಿಸಿ; ಗುರುತನದ ತನ್ನೊಂದು ಪ್ರಭಾವದ ಹಿರಿಮೆಯಂ ಬೀರಿ; ದ್ವಿಜಕುಲದ ಕನ್ನೆ ನಿನ್ನಂ, ಕ್ಷಾತ್ರೇಯನೀ ರಾಜೇಂದ್ರಚಂದ್ರನಿಂಗಿತ್ತು, ಮದುವೆಯಂ ಗೈದಾಗಲೇ ನಿನ್ನ ಪಿತ 'ಧರ್ಮ'ಮಂ ಮೀರಿ ನಡೆದಿರ್ಪನಲ್ತೆ? ಧರ್ಮ ಸೂಕ್ಷ್ಮದ

ಮರ್ಮವನ್ನರಿತು ಬೋಧಿಸುವ ನಿನ್ನಯ್ಯನಾ ತಪ್ಪಿತಕೆ ನೀನೇಕೆ ಮತ್ತನ್ಯರಂ ಹಳಿಯುತಿರ್ಪೆ?

ದೇವಯಾನೆ:–(ಸಿಟ್ಟಿನಿಂದಲೇ) ಶರ್ಮಿಷ್ಟೆ! ನಿನ್ನೆದೆಯ ಮಡುವಿನೊಳ್ ಹೆಡೆಯನಾಡಿಸುತಿರ್ಪ, ಕಾಳಸರ್ಪಂಗಳಿರ್ಪುದಂ, ತಿಳಿದಿರ್ಪೆ ನಾಂ. ನನ್ನ ಹಿತಕಾಗಿ ನಿನ್ನನಾಂ ತೊತ್ತಾಗಿ ತಂದುದಲ್ಲ. ನೀನುಮಂತೆಯೆ ನನ್ನ ಹಿತವ ಬಯಸುತ್ತೆ ಬಂದುದಲ್ಲ. ಬಲ್ಲೆ ನಾನೆಲ್ಲವಂ......ಪ್ರತಿಹಿಂಸೆಗಣಿಯಾಗಿ ಫಣಿಯಂತೆ ನೀಂ ಕಾಲವಂ ಕಾಯುತಿರ್ದೆ. ಕಾಲವಂ ಹೊಂಚಿ, ಸಂಚುಗಳ ಹೂಡುತ್ತೆ ಮುಂದೇನ ಗೈದಪೆಯೋ ನೋಡಿದಪೆ ನಾಂ. ನನಗಿಲ್ಲದಾ ಸುಖಂ ಧರೆಯೊಳಾರ್ಗುಂ ಬೇಡ......ಬೇಡ ನನಗೀ ಮಹಾರಾಜಮಂದಿರಂ, ಮಕ್ಕಳುಂ, ಮಂದಿಯುಂ, ನನಗಾವುದುಂ ಬೇಡ. ಸುಖಸಿರಿಯ ಬೊಕ್ಕಸದ ಭೋಗ ಸಾಧನಂಗಳೊಂದುಂ ಬೇಡ ನನಗೆ...... [ಯಯಾತಿಯ ಕಡೆ ಹೊರಳಿ] ಮಹಾರಾಜ! ನನಗಿಲ್ಲಿನಾ ಸೌಭಾಗ್ಯಮೆಲ್ಲಂ ಸಾಕು. ನಿನಗಿನ್ನುಮೆನ್ನ ದಾಸಿಯೇ ಸಾಕು......[ವಿಷಾದದಿಂದ] ನಾನೆನ್ನ ತನುಮನಂಗಳ ಮೇಣ್ ರೂಪಜವ್ವನಂಗಳನೆಲ್ಲಮಂ ಹೊನಲಾಗಿ ಸುರಿಸುರಿದು ನಿನ್ನೆಡೆಯೊಳರ್ಪಿಸುತೆ, ಸುಧಾಮಯಮಿದೆಂದರಿದು, ಸಂಸಾರಸಾಗರದಿ, ಸಂತಸದ ತೆರೆತೆರೆಯನೆಬ್ಬಿಸುತೆ, ಮತ್ತದರೊಳೀ ನಿನ್ನಂ ತೇಲಿಸುತೆ, ಚಿತ್ತದಾನಂದಮಂ, ನಿನಗಿತ್ತು ನಾಂ ಪಡೆಯುತಿರ್ದೆ. ಆದೊಡೇಂ......ಮಧ್ಯದೊಳಗೆದ್ದ ಹಾಲಾಹಲದ ಬೀಭತ್ಸಜ್ವಾಲೆಯಿಂ ನನ್ನಮನಬೆಂದಿಹುದು......ನೊಂದಿಹುದು......ದೊರೆಯೇ! [ಗಂಭೀರತೆಯಿಂದ] ನಾನಿಲ್ಲಿ ನಿಲ್ಲಲಾರೆಂ......ನಿಲ್ಲಲೂ ಒಲ್ಲೆಂ......

ಯಯಾತಿ:—[ಗಾಬರಿಯಿಂದ] ಹಾ! ದೇವಯಾನೆ! [ದುಃಖದಿಂದ ಎದ್ದು ದೇವಯಾನೆಯನ್ನು ಸಂತೈಸುವ ಸಲುವಾಗಿ ಕೈನೀಡಲು ಆಕೆಯು ಸಿಡಿದು ನಿಲ್ಲುವಳು. ಮತ್ತೂ ಆಕೆಯ ಬಳಿ ಸಾರಿದಂತೆಲ್ಲ ಆಕೆ ಸಿಡುಕಿನಿಂದ ದೂರ ಸರಿಯುತ್ತಲೇ ಇರುವಳು. ಶರ್ಮಿಷ್ಟೆಯು ಗಂಭೀರವಾಗಿಯೇ ದೂರ ನಿಂದಿರುವಳು.] ದೇವಯಾನೆ! ಸಿಡುಕಬೇಡ, ದುಡುಕಬೇಡ......ಇದೋ......ಎಲ್ಲವನ್ನೂ......ಶಾಂತಿಯಿಂದ...... ಬಗೆಹರಿಸೋಣ! ತಡೆ......ನೀನು......ಛೆ!......

ದೇವಯಾನೆ:—[ಕ್ರೋಧ ಸಂತಾಪಗಳಿಂದ ಕೂಡಿ] ನನಗಿಲ್ಲಿ... ಇನ್ನೆಲ್ಲಿ ಶಾಂತಿ! ಶಾಂತಿ!......ಶಾಂತಿಯಾ ಮನೆಯಿಲ್ಲ,...ಮನವಿಲ್ಲ... ನಮ್ಮೊಳಗೆ ಶಾಂತಿಯಿಲ್ಲ.........ಶಾಂತಿಯೊಳಗಿನ್ನು ಸಾವಿಲ್ಲ......... [ವಿಷಾದದಿಂದ] ಬಯಲಭ್ರಾಂತಿಯಂ ನೆಚ್ಚಿ......ನನ್ನ ಮನ ಹುಚ್ಚಾಗಿ ಹೋಗಿತ್ತು.. ...ಎಚ್ಚರಿಲ್ಲದೆ ಹೋಯ್ತು.........ಮಚ್ಚರದ ಮಡುವಿನೊಳ್ ಅರಿಯದೇ ನಾಂ ಬಿದ್ದುದಾಯ್ತು. (ಸಿಟ್ಟಿನಿಂದ) ಶಾಂತಿಯಿಲ್ಲೆನಗೆ ರಾಜೇಂದ್ರ! ಮುಂದದಂಬಯಸೆನಾನೆಂದಿಗುಂ......ಬಯಸಿದೊಡೆ...ನನ್ನ ದೆಸೆಯಿಂದೆ ದೊರಕದದುಮಾರ್ಗುಂ......(ಕಾರುಣ್ಯ ಭಾವ) ನನಗೆನ್ನ ಪಿತನಿಹನು......ವಾತ್ಸಲ್ಯದಿಂ ಸಲಹುವನು......[ವಿಷಾದ, ಕಾರುಣ್ಯಗಳಿಂದ]......ಅಂದದೋ......ನನ್ನನೀಂ...ಮೊದಲಸಲ ಕಂಡಂದು... ನಿನ್ನೊಳಾಂ ಬೇಡಿರ್ದೆ..."ಕೊಳ್ಳೆನ್ನ ಸರ್ವಸ್ವ"ವೆಂದು...ಕೊಂಡೆಯೇಂ? ಮಹಾರಾಜ!...ಹುಂ! ಕೊಂಡಿರ್ದೆ...ಬೇಕಾದ ಸುಖವನುಂಡಿರ್ದೆ...... ಉಂಡುಂಡು ಮಕರಂದಮಂ.........ತಣಿಯದಿಹತುಂಬಿ.........ಹೂವ ಕಂಡತ್ತ ಹಾರುತ್ತೆ ಜೇನ ಹೀರುತ್ತೆ, ಮಧುವನೊಲಿದಿತ್ತ ಹೂವಿನೆದೆಯಂ, ಕಾಲೂರಿ ನೋಯಿಸುತೆ ಸಾಗುತಿರ್ದಪುದು ಸಾಜಮಲ್ತೆ?...ಬಂಡುಣಿಗೆ ಬಂಡನುಂಬುದೆ ಹೊರತು......ಪುಷ್ಪಗಳ ಯೋಗ್ಯತೆಯ ಪರಿವೆಯಿರ್ದಪುದೆ?...ಉದ್ಯಾನವನ ಭೂಷಣಕೆ ಮುಡಿಪಾದ...ಮಲ್ಲಿಗೆಯ ಮೇಳೆರಗಿ ಜತೆಯೊಳೇ...ಪ್ರೇತವನ...ಕುಸುಮಕ್ಕೆ ನೆಗೆದಪುದು. ಹಾಯ್!...... ಭ್ರಮರಮೋ......ಭ್ರಾಮಕಮೆ! ......ಮ ಹಾ ರಾ ಜ !......ನಾನಿದೋ ಪೊರಟಿಹೆಂ......ಮನದಣಿಯೆ ಮಧುವಿತ್ತ ನಿನ್ನ ಮಲ್ಲಿಗೆಯು; ಹೂವರ ಬೇರ್ ಹುದುಗಿರ್ಪ...ನೆಲದತ್ತ ಉದುರಿ ಬೀಳುತಿದೆ...ಹುಂ!...[ಕ್ರೋಧ ದುಃಖದಿಂದ] ಶರ್ಮಿಷ್ಠೆ! ಶಾಶ್ವತದ ಸಂತೋಷಮಾಯ್ತಲ್ತೆ ನಿನ್ನೆಡೆಗೆ... ನಿನಗಿರಲಿ ಈ ಮಹಾರಾಜನುಂ, ಮತ್ತಾತನಾ ಸಾಮ್ರಾಜ್ಯಮೆಲ್ಲಂ...... ನಾನಿದೋ ನಡೆದಪೆಂ; ನನ್ನಯ್ಯನೆಡೆಗೆ...ಅಲ್ಲಿಹುದು ನನಗೆ ನೆಲೆ, ಇಲ್ಲಿಲ್ಲ, ಇಲ್ಲಿ ನಿನಗೇ ಎಲ್ಲ. ಎಲ್ಲ ನಿನಗೆ. [ಕೂಡಲೇ ಉಟ್ಟ ಬಟ್ಟೆಯಲ್ಲೇ ಹೊರಡುತ್ತಾಳೆ. ನೋಡಿ ಯಯಾತಿಯು, ತೀರಾ ಹಣ್ಣಾಗಿ ಆಕೆಯ ಸೆರಗನ್ನು ಜಗ್ಗಿ ಹಿಡಿಯುತ್ತಾನೆ.]

ಯಯಾತಿ:—[ದುಃಖದಿಂದ] ದೇವಯಾನೆ!... ದಯದೋರು... ಹೃದಯೇಶ್ವರಿ,......ಕೈಬಿಡದಿರೆನ್ನಂ.........ದೇವಿ! ನೀನೇಗತಿ, ನೀನೆ ನಿಯತಿ, ಮತ್ತೆಲ್ಲ ನೀನೆ......ನಿಲ್ಲು...ನಡೆಯದಿರು, ನಿನ್ನಾತ್ಮವಲ್ಲಭನ ಮರೆಯದಿರು.........[ದೇವಯಾನೆಯು ಏನೆಂದರೂ ಕೇಳದೆ ಹೊರಟೇ ಹೋಗುತ್ತಾಳೆ. ರಾಜನು ಪ್ರಲಾಪಿಸುತ್ತಾ ಅವಳ ಸೆರಗನ್ನು ಜಗ್ಗಿಗೊಳ್ಳುತ್ತಾ ಹಿಂದೆಯೇ ಓಡುತ್ತಾನೆ. ಶರ್ಮಿಷ್ಟೆಯು ಎಲ್ಲವನ್ನೂ ಚಿತ್ರದ ಗೊಂಬೆಯಂತೆ ನೋಡುತ್ತಾ ಇಬ್ಬರೂ ಹೊರಟುಹೋದ ಕೂಡಲೇ, ಹತಾಶಳಾಗಿ ಭಗವಂತನನ್ನು ಪ್ರಾರ್ಥಿಸುವಳು.]

ಶರ್ಮಿಷ್ಟೆ:—ಹಾಯ್! ದೈವವೇ! ದಹಿಸುತಿದೆ ನನ್ನೆದೆಯು. ಭಗವಾನ್!......ಅಪರಾಧಮೇನಿರ್ದರೂ ...... ಶಿಕ್ಷೆಯನ್ನೆನಗಿತ್ತು ... ಜಗದೀಶ್ವರಾ! ರಾಜರಾಣಿಯರನಂತೆಯೇ ಲೋಕದಾ ಕ್ಷೇಮಮಂ ಕಾಯ್ದು ಕೊಡು, ಪ್ರಭೋ! ಶಂಕರಾ! (ಪರದೆ ಬೀಳುವುದು.)

೬ನೇ ದೃಶ್ಯ

[ಯಯಾತಿಯ ಅರಮನೆಯ ಅಂತರ್ಭವನ. ರಾಜನು ಅತಿಯಾದ ದುಃಖದಿಂದಲೂ, ನಿರಾಶೆಯಿಂದಲೂ ಕೂಡಿ, ತನ್ನೆರಡು ಕೈಗಳಿಂದಲೂ ಮುಖವನ್ನೊಮ್ಮೊಮ್ಮೆ ಮುಚ್ಚಿಕೊಂಡು, ವಿಷಾದಪಡುವನು. ಅಂತೆಯೇ ನೆಲವನ್ನೊಮ್ಮೆ, ಬಾಹ್ಯವನ್ನೊಮ್ಮೆ ನೋಡುತ್ತಾ ದೀರ್ಘವಾದ ನಿಟ್ಟುಸಿರನ್ನೆಳೆಯುತ್ತಿರುವನು. ಒಮ್ಮೊಮ್ಮೆ ತನ್ನ ತಲೆಯನ್ನೇ ಕೈಗಳಿಂದ ಬಡಿದುಕೊಳ್ಳುವನು.]

ಯಯಾತಿ:—ಅಯ್ಯೋ! ದುರ್ವಿಧಿಯೆ!...ಶಾಪಮಂ ಪೊತ್ತು... ಸಾವಂತಾಯ್ತು...ಹಾ!...ನನ್ನ ಗತಿಯೇ...ಶಾಪ! ಶಾಪ!!...ಹಾಯ್ ಶಾಪ...ಅಯ್ಯೋ! [ಎದ್ದು ನಿಲ್ಲಲು ಪ್ರಯತ್ನಿಸುತ್ತಾನೆ. ಚೈತನ್ಯವಿಲ್ಲದೆ, ಅಲ್ಲೇ ಕುಕ್ಕುರಿಸಿ ಬೀಳುತ್ತಾನೆ.]......ಅಯ್ಯೋ! ......ಕೀರ್ತಿಯನೆ ಹೊತ್ತು...ಹೆಚ್ಚಿರ್ಪ...ನಮ್ಮ ವಂಶದ...ರಾಜ್ಯಪಟ್ಟಮಂ ಪಡೆದು...... ಸರ್ವಹಿತ...ಧರ್ಮಮಂ ಪಾಲಿಸುತೆ...ದೈತ್ಯಗುರುವಿನ......ಶಾಪಮಂ ಪೊತ್ತೆನಾಂ...ಹುಂಂಂ! ದೇವಯಾನೆ...ಶರ್ಮಿಷ್ಟೆ...ಧರ್ಮಪತ್ನಿ...... ಧರ್ಮದಾ...ದಾಸಿ...ಅಯ್ಯೋ!...ಧರ್ಮಮೇ! ಹಾ! ಮಕ್ಕಳು...... ಮಕ್ಕಳು. ಮಕ್ಕಳಿಲ್ಲದಿರೆ......ಇಲ್ಲದಾ......ಚಿಂತೆಯೊಂದೆ......ಇರ್ದರೆನಿತೆನಿತೋ...ಚಿಂತೆಗಳು ... ಹಾಯ್!......ಮಕ್ಕಳಿಹರೆಂದು ... ನಂಬಿದೊಡೆ...ಸುಖಕಲ್ಲದೇನ್...ನಮ್ಮ.....ಕಷ್ಟದೊಳ್... ತಲೆಯನೊಡ್ಡು

ವರಿಹರೆ?... ಸತ್ತಮೇಲ್......ಸದ್ಗತಿಗೆ......ಕಾರಣರಂತೆ......ಜೀವ ವಿರ್ದಾಗ...ಸುಖವನೀಯದ...ಮಕ್ಕಳೇನ್...ಸತ್ತಮೇಲ್... ಗತಿ ಯ ಕಾಣಿಪುದೋ?......ಅಯ್ಯೋ!...ಮಕ್ಕಳಂ...ಶೈಶವದಿ...ಕಂಡಾಗ... ಮನಕೆಷ್ಟು...ಸಂತಸಂ...ನಗುನಗುತೆ...ನಡೆದೆದ್ದು...ಬರುತಿರಲ್...... ಮೊಗದಮೇಲ್ ಕೈಯ್ಯಾಡಿಸುತೆ......ನಲ್ಕದಪುಗಳ......ಸವರುತ್ತೆ... ಗಲ್ಲಮಂ...ಪಿಡಿದಾಡಿಸುತೆ...ಮುದ್ದಿಸುತೆ... ತನ್ಮಯತೆಯೊಳ್...... ಕಾಲಮಂ...ಸುಖದೊಳೇ...ಕಳೆದಪೆವು..... ನಾವನುದಿನಂ...ಕುವರರಂ ಬಹುಪ್ರೀತಿಯೊಳ್...ಸಾಕುತಿಹೆವು......ನಮಗಿಲ್ಲದಾ......ಸುಖವನೆಲ್ಲ ಮಂ...ಪಡೆದುಂಡು...ಸುಖಿಸಲೆಂದೇ...ದಿನದಿನಂ... ಹಾರೈಸುತಿಹೆವು... ಬೆಳೆಬೆಳೆದು...ಬೆಳೆದಂತೆ... ಹಡೆದವರ......ಹಿರಿಯಾಸೆಯಂ... ಕುಮರಿ ಸುತೆ...ಪೆತ್ತವರನಂತೆಯೇ...ಪೆತ್ತವರ ಮಾತುಗಳ...ನೀಕರಿಸಿ...... ನಡೆದಪರು. [ಕ್ಷಣಕಾಲ ಮೌನ]...ಅಯ್ಯೋ! ಅಯ್ಯೋ!...ನಾನೇಕೆ... ಮಕ್ಕಳಂ...ಹಳಿಯುತಿರ್ಪೆಂ? ಮಕ್ಕಳಿಂ...ಪಡೆವ ಭಾಗ್ಯಮೇನನುಂ... ಜನ್ಮದಿಂ ಹೊತ್ತು......ನಾಂ......ಬಂದಿಲ್ಲ.........ಪೆತ್ತಯ್ಯ ನಿಂಗಾ ಯೋಗ್ಯತೆಯು...... ಕೂಡಿರ್ದರಲ್ತೆ......ಮಕ್ಕಳಿಂಗಾ... ಸದ್ಬುದ್ಧಿ... ಬಂದಪುದು......ಅಯ್ಯೋ!.....[ಅಷ್ಟರಲ್ಲಿ 'ಪೂರು' ಎಂಬ ಶರ್ಮಿಷ್ಠೆಯ ಕಿರಿಯ ಮಗನನ್ನು ಮುಂದಿಟ್ಟುಕೊಂಡು, ಪಶ್ಚಾತ್ತಾಪ ಭಾವದಿಂದ ದೇವ ಯಾನೆಯು ಬರುವಳು.]

ದೇವಯಾನೆ:—ರಾಜೇಂದ್ರ! ಮಗನು ಬಂದಿಹನು. [ಯಯಾತಿ ಯು 'ಪೂರು'ವನ್ನು ಒಮ್ಮೆ ಕುತೂಹಲ ಭಾವದಿಂದ ನೋಡುವನು.]

ಪೂರು:—[ಮೊಣಕಾಲನ್ನೂರಿ ವೀರೋಚಿತ ಭಾವದಿಂದ ನಮಸ್ಕರಿ ಸುವನು.] ಅಪ್ಪಾ!

ಯಯಾತಿ:—ಮಗನೆ! [ಮಗನನ್ನೊಮ್ಮೆ ಅಪ್ಪಿಕೊಳ್ಳುವನು. ದೇವ ಯಾನೆಯ ಕಡೆ ತಿರುಗಿ] ಆಕೆ......ಬಂದಿಲ್ಲವೇಂ?

ದೇವಯಾನೆ:—ಇಲ್ಲನಾಥ! ನಾನಾಕೆಯಂ ಕಂಡಿಲ್ಲ. ಬರುವಂತೆ ದೂತಿಯಂ ಕಳುಹಿರ್ಪೆ. ನಾನ್ನೈದುತಿರೆ ದಾರಿಯೊಳೆ ಬರುತಿರ್ದ ನೀ ಕುಮಾರಂ. ನಿನ್ನಾಜ್ಞೆಯಂ ನುಡಿದು ಕರೆತಂದೆ ನಿಲ್ಲಿ.

ಯಯಾತಿ:—ಹುಂ! ......

ಪೂರು:—ಅಪ್ಪಾ! ನನ್ನನೇಕಾಗಿ ಕರೆಸಿರ್ಪೆ.........ಇದೇನು ಇನಿತೊಂದು ದುಃಖ, ಏನಾಯ್ತು ಜನಕ?

ಯಯಾತಿ:—ಈ......ನತ ದೃಷ್ಟನಿಂಗಿಂದು......ಆಗಬೇಕಾದುದೆಲ್ಲಂ......ಆಯ್ತು......ಕಂದ......

ಪೂರು:—ತಾತಾ! ಆದುದಾರು ಏನು?......ಯಾರಿಂದ?

ದೇವಯಾನಿ:—ಕುಮಾರ! ಬಂದಿರ್ಪ ವಿಷಮತರ ಸಂಕಟಕೆ ಕಾರಣಳು ನಾನೆ ಕಂದ! (ಪಶ್ಚಾತ್ತಾಪದಿಂದ) ನಚ್ಚಿನಾ......ಸೌಭಾಗ್ಯದರಸನಂ ಇಹಪರದ ಸದ್ಗತಿಯನೊಲಿದೀವ ಪತಿದೇವನಂ......ಜೀವನದ ಸರ್ವಸ್ವನಂ......ಕೈಯ್ಯಾರೆ......ಘೋರತರ ಪರಿಭವಕೆದೂಡಿರ್ಪ ದುಷ್ಟೆ ನಾಂ...ಪರಮ ಪಾಪಿಣಿಯು ನಾಂ......ಹಿಂದುಮುಂದಿನ......ಗತಿಯನೊಂದನುಂ ... ಲೆಕ್ಕಿಸದೆ ... ಬುದ್ಧಿಶೂನ್ಯಳುವಾಗಿ,...ನಾನೆಗೈದಿರ್ದ... ಅಕ್ಷಮ್ಯದಪರಾಧದಿಂ...ನಿನ್ನಯ್ಯನೀ ಮಹಾರಾಜತಾಂ...ಶಾಪಾಗ್ನಿಯಿಂ ಬೇಯುತಿಹನು. [ಯಯಾತಿಯು ದೀನತೆಯಿಂದ, ಮಗನನ್ನೂ ದೇವಯಾನೆಯನ್ನೂ ನೋಡುತ್ತಿರುತ್ತಾನೆ. ತಲೆಯನ್ನು ಸವರಿಕೊಳ್ಳುತ್ತಾನೆ.]

ಪೂರು:—ಹಾ! (ಆಶ್ಚರ್ಯದಿಂದ) ದೇವಿ! ಯಾಗದೊಳ್ ದಿವಿಜರಂ, ತ್ಯಾಗದೊಳ್ ಭೂದಿವಿಜರಂ, ಆಗಾಗ ತುಷ್ಟಿಪಡಿಸುತ್ತೆ, ಸದ್ಧರ್ಮದಿಂ ಪ್ರಜೆಗಳಂ ಪಾಲಿಸುವ ನಮ್ಮ ದೊರೆ, ಮತ್ತೇಕೆ ಶಾಪಕ್ಕೆ ತುತ್ತಾದ ತಾಯೆ?

ದೇವಯಾನಿ:—ವತ್ಸ!......ನಿನ್ನವ್ವೆಯುಂ... ದಾಸಿಯಾಗಿಯೆ ಪಡೆದು, ನಾನಿಲ್ಲಿ ಬಂದಿಹುದ ನೀನೆಲ್ಲಮುಂ ತಿಳಿದಿರ್ಪೆಯಲ್ತೆ?

ಪೂರು:—ಬಲ್ಲೆ ತಾಯಿ!

ದೇವಯಾನಿ:—ಬಾಲ್ಯದಿಂ ಬಂದಿರ್ದ ದ್ವೇಶದಿಂ ನಾನಾಕೆಯಂ ನರಕಮಯ ಯಾತನೆಗೆ ದೂಡಿರ್ದೆ ಕಂದ! ದಾಸಿಯಾಗಿರ್ಪ ನಿನ್ನವ್ವೆಯೊಳ್...ನನ್ನರಸನೇ ನಿಮ್ಮೆಲ್ಲರಂ ಪಡೆದನೆಂದರಿದು ಮತ್ಸರದಿ ನಾನಾತನಂ, ನಿಂದಿಸುತೆ ನನ್ನಯ್ಯನೊಳ್ ದೂರನಿತ್ತಿರ್ದೆ......ದೈತ್ಯಗುರು ಶುಕ್ರನೆನ್ನ ಜನಕಂ ಬಲ್ಲೆನೀಂ, ಶಪಿಸಿದಂ ಮಹಾರಾಜನಂ, ಹರೆಯದೊಳೆ ಮುದುವನಾಗೆಂದು ಮುಳಿದು.

ಪೂರು:—[ಕ್ಷಣಕಾಲ ಸುಮ್ಮನಿದ್ದು] ಶಪಿಸಿದಾತಂ ನಿನ್ನ ಜನಕಂ, ಜನನಿ! ನೀಂ ದಯೆಗೈಯ್ಯೆ ದೈತ್ಯಗುರು, ಪರಿಹಾರಮಂ ಪೇಳದಿಹನೇ?

ದೇವಯಾನಿ:— ಪರಿಹಾರವಿರ್ದಪುದು ವತ್ಸ! ಮಗನಿರ್ಗೋರ್ವಂಗೆ ಮುಪ್ಪನೀಯುತ್ತೆ, ಬಹುಕಾಲ ಯವ್ವನದಿ ಬಾಳುತ್ತೆ, ಮತ್ತಂತೆಯೇ ಜೀವನದಿ ತೃಪ್ತಿಬರೆ ಮಗನಿಗಾಯವ್ವನವ ಮರಳಿಸುತೆ, ಮುಪ್ಪಂ ಪಡೆದು, ಶಾಪದಾನುಡಿಯನಂದಿಂದೆ ಪಾಲಿಸಲ್ ತೊಡಗಲಹುದು.

ಪೂರು: –[ಮನಸ್ಸಿನಲ್ಲೇನೋ ಯೋಚಿಸುತ್ತಾ ಮೌನವಾಗಿರುವನು. ಅಷ್ಟರಲ್ಲಿ ಶರ್ಮಿಷ್ಟೆಯೂ ಬರುವಳು. ಕ್ಷಣಕಾಲ ಎಲ್ಲರೂ ಮೌನವಾಗಿರುವರು. ರಾಜನು ನಿಟ್ಟುಸಿರನ್ನು ಬಿಡುತ್ತಾ, ಶರ್ಮಿಷ್ಟೆಯನ್ನೊಮ್ಮೆ ಕುತೂಹಲ ಭಾವದಿಂದ ನೋಡುತ್ತಾ,]

ಯಯಾತಿ:— ಕುಮಾರ! ನನ್ನ ಗತಿಯಿಂತಾಯ್ತು...ಮಗನೇ! ಇಲ್ಲಿ ಬಾ...ತೀರಾ ಸನಿಹಕ್ಕೆ...ಬಾ...ಈಗಾಗಲೇ...ದೇಹ ಶಕ್ತಿಯು.. ಕುಗ್ಗಿ...ಕೈಕಾಲು...ನಡುಗುತಿದೆ... ಕಂದ...ಸರ್ವೇಂದ್ರಿಯಂಗಳು...... ಸೊರಗಿ...ಹಿಪ್ಪೆಯಾಗಿಹವು...ರೂಪದೊಳ್...ಜರೆಯು ಬಂದಿಹುದಲ್ಲ... ಶಾಪದಾ......ನುಡಿಯಿಂದೆ......ಅಕಾಲದೊಳ್......ಸವನಿಸಿದ...... ವಾರ್ಧಿಕ್ಯವು...ದೇಹದಂತರ್ಯದಾ...ಚೈತನ್ಯಮಂ...ಕುಂದಿಸುತೆ, ನರನರಂಗಳ...ಶಕ್ತಿಯಂ...ಕಳೆದು...ತನುವಿನಾ......ದೌರ್ಬಲ್ಯಮಂ ... ವರ್ಧಿಸಿತು.......ಹಾಯ್! [ದೇವಯಾನಿಯೂ ಬೆನ್ನನ್ನು ಸವರುತ್ತಾಳೆ, ಶರ್ಮಿಷ್ಟೆಯು ವ್ಯಜನದಿಂದ ಬೀಸುತ್ತಾಳೆ.] ವತ್ಸ!...ಐದು...ಮಕ್ಕಳ... ಪಡೆದು........ಭಾಗ್ಯಶಾಲಿಯು ... ನಾನು......ನೀವೆಲ್ಲರುಂ......ರಾಜ್ಯಭಾರದ......ಹೊರೆಯ......ನಿರ್ವಹಿಸಲಿನ್ನುಂ...ಚಿಕ್ಕವರು... ವಿಸ್ತಾರ ಮಾದೆಮ್ಮ...ಸಾಮ್ರಾಜ್ಯಮೆಲ್ಲಂ...ಅರಾಜಕಮಾದಪುದು ... ನಾನುಂ... ಧರ್ಮಸಂಕಟದಿ ಬಿದ್ದು......ಅಕಾಲಮೊಳೆ......ಶಾಪಕ್ಕೆ ತುತ್ತಾಗಿ... ಮುಪ್ಪಿನೊಳ್...ನರಳುತಿಹೆನು...ಜೀವನದ... ನನ್ನ ... ಆಸೆಯಾಕಾಂಕ್ಷೆಗಳ್...ನನ್ನನಿನ್ನುಂ...ಅಡಿಗಡಿಗೆ...ಬಾಧಿಸುತಲಿಹವು. ಮತ್ತದೇ... ಬಯಕೆಯೊಳ್......ಸತ್ತಾಗ......ಪಡೆದಾಸೆಯಂ...ಪೂರೈಸೆ ... ಮತ್ತೆ ನಿತೆನಿತೋ...ಜನ್ಮಂಗಳಂ... ಪಡೆಪಡೆದು......ಹುಟ್ಟಲಿಹುದು.......ಆಸೆಯಳಿಯದೊಡೆ......ಜೀವನಿಗೆ......ಮೋಕ್ಷವಿಲ್ಲ ... 'ಪುನ್ನಾಮ' ... ನರಕದಿಂ.... ಪಿತನನೆತ್ತುವನಾತ್ಮಪುತ್ರಂ......ಕುಮಾರಾ!......ಈ... ಎಲ್ಲಮಂ......ನಿನ್ನಿಂಮೊದಲು......ಜನಿಸಿರ್ದಿ...ನನ್ನಣುಗರಂ... ಓರ್ವ

ರೋರ್ವನೆ...ಕರೆದು...ನುಡಿದಿರ್ದೆನಾಂ...ಮತ್ತಂತೆಯೇ... ಶಾಪದಾ... ಜರೆಯು...ಬಹುಸ್ವಲ್ಪ......ಕಾಲಕಾದರುಂ......ಕೊಳ್ಳುತ್ತೆ...ನನ್ನಂ... ರಕ್ಷಿಸಿರಿ...ನೀವೆಂದು...ಬಹುರೀತಿಯೊಳ್......ಬೇಡಿರ್ದೆ. ...ಹಾಯ್! ಪುಣ್ಯಮೆನಗಿಲ್ಲ...ಕಂದ!... ಹಿರಿಯ ನಾ......'ಯದು'ವು...ಮಾತಾಡದೆಯೆ...ನಡೆದಂ,...'ತುರ್ವಸು'ವು. . ತಲೆಯನಲ್ಲಾಡಿಸುತೆ...ಪೋದಂ, ...'ಅನು'ವೆಂಬವಂ..... ಒಲ್ಲೆನೆಂದಂ,......ದೃುಹ್ಯುತಾಂ ... ಮನವಿಲ್ಲವೆಂದಂ...ವತ್ಸ! 'ಪೂರು'...ಕಿರಿಯವಂ...ನೀಂ...ನೀನೋರ್ವನಿರ್ಪೆ... ನಿನ್ನ ಕೈಯ್ಯೊಳಗಿಹುದು...ಕಂದ!...ನನ್ನೆಲ್ಲ......ಕ್ಷೇಮಂಗಳುಂ,...... ಇದೋ......ನೀನಿತ್ತೊಡುಂಟು...ನನಗೆನ್ನ...ಯವ್ವನದ ಭಾಗ್ಯಂ,... ನೀನಿತ್ತೊಡುಂಟು...ಮಗನೇ!...ನನ್ನೆಲ್ಲ ಸೌಖ್ಯಂ...(ನಿಟ್ಟುಸಿರು. ಬವಳಿ ಬಂದಂತಾಗುವುದು.)

ಪೂರು:—[ಕ್ಷಣಕಾಲ ಯೋಚಿಸುತ್ತಾ] ಅಪ್ಪಾ! ಸತ್ಕೀರ್ತಿಯಾ ಸತ್ತಿಗೆಯನೆಳಲಿನೊಳ್, ಸತ್ಯದಿಂದಾವಗಂ, ಧರೆಯನಾಳುತ ಜಗದೊಳೇ ಪೆಸರಾಂತ 'ಪೆರೆ'ಯ ಪರಂಪರೆಯ ಮಹಾರಾಜನೀಂ. ಕೀರ್ತಿಚರಿತಂ, 'ಧರ್ಮ'ನಿರತಂ; ಕಾರುಣ್ಯದಿಂ 'ದಾಸಿ'ಯಾಗಿರ್ದೆನ್ನ ಜನನಿಯುಂ ನೀನೊಲ್ದ ಧರ್ಮಮಯ ಪ್ರೇಮಮೇ ಜೀವಾತುವೆನ್ನ ಜನ್ಮಕ್ಕೆ. ವಾತ್ಸಲ್ಯದಿಂ, ನನ್ನನೀಂ 'ಮಗ'ನೆಂದು ಕರೆದಾಗಳೇ ಧನ್ಯನಾದೆಂ ತಾತ! ನಿನ್ನಡಿಯ ಧೂಳಿಯುಂ, ಬೊಟ್ಟಿಟ್ಟು ಬಾಳುತಿಹ ಭಾಗ್ಯಮೇ ಸಾಕೆನಗೆ. ನಿನ್ನಿಂದೆ ಜನ್ಮಿಸುತೆ ಮಗನಾಗಿ, ನಾನೀವುದೇನಿಹುದು ನಿನಗಾಗಿ, ಬೇಕಾದುದಂ ಕೊಳ್ಳೆನ್ನ ತಂದೆಯೇ, ನನ್ನೊಳೇನುಂ ಭಿನ್ನತೆಯ ಕಾಣೆ ನೀಂ. [ಗಂಭೀರತೆಯಿಂದ] ತನ್ನೆಲ್ಲ ಸುಖಗಳಂ ತ್ಯಜಿಸುತ್ತೆ ನನ್ನವ್ವೆ ತಾನೇಕೆ ತೊತ್ತಾಗಿ ಬಂದಿಹಳೋ? ಮತ್ತೇಕೆ ನೀಂ ದಾಸಿಯಾದೆನ್ನ ಜನನಿಯೊಳ್ ಮಗನಾಗಿ ನನ್ನಂ ಪಡೆದಿಹೆಯೋ? ನಾನದೇ ಆ ಪವಿತ್ರತಮ 'ಧರ್ಮ'ಮಂ ಪಾಲಿಸಲ್, ಓ ಜನಕ! ಚಂದ್ರ ಸೂರ್ಯಾಗ್ನಿಗಳ ಸಾಕ್ಷಿಯುಂ ನೆಮ್ಮಿ ನಾನಿದೋ ನಿನ್ನಾಣತಿಗೆ ಶಿರಬಾಗಿ ನಿಂದಿಹೆನು. [ಮೊಣಕಾಲನ್ನೂರಿ ತಂದೆಗೆ ನಮಸ್ಕರಿಸುವನು.]

ಶರ್ಮಿಷ್ಠೆ:–[ಪಕ್ಕನೆ ಬಂದು ಅಪ್ಪಿಕೊಂಡು] ಮಗನೇ! ನಿನ್ನವ್ವೆಯಾ ಬಸುರಿಂದು ಪಾವನಮಾಯ್ತು. . ಕಂದ [ಅವನ ತಲೆಯ ಮೇಲೆ ಕೈಯ್ಯಿಟ್ಟು] ಸುಖವಾಗಿ ಬಹುಕಾಲ ಬಾಳು...

ಯಯಾತಿ:—ಶರ್ಮಿಷ್ಠೆ!......ನಿನ್ನ ಬಸುರೊಂದಲ್ಲ...ಚಂದಿರನ ಕುಲಮೇ...ಪುನೀತವಾಯ್ತು...ಬಾ! ಕಂದ...[ಅಪ್ಪಿಕೊಳ್ಳುವನು.]

ದೇವಯಾನಿ:—[ತಾನೂ ಮಗನನ್ನು ಬಾಚಿ ತಬ್ಬಿಕೊಳ್ಳುವಳು.] ಕುಮಾರಾ! ಭಾಗ್ಯಶಾಲಿಯು ನೀನು. ನನ್ನೆದೆಯು ಪೂರ್ಣ ಸಂತಸದಿಂದೆ ಹರಸುತಿಹೆನಾಂ ನಿನ್ನ...ಆಜನ್ಮ ಮೊದಲಾಗೆ ನಾನೇನಾದೊಡಂ ಸತ್ಕರ್ಮ ಮಂ ಗೈದಿರ್ಪೆನಾಗಿರ್ದೊಡೆ, ಇದೋ ನೀನದರ ಫಲದ ಬಲದಿಂದೆ ಸೌಭಾಗ್ಯದಿಂ ಚಿರಕಾಲ ಬಾಳು ಕಂದ!

ಪೂರು:—[ಮೌನದಿಂದ ನಮಸ್ಕರಿಸುತ್ತಾನೆ.]

ದೇವಯಾನಿ:—ವತ್ಸ! ನನ್ನಯ್ಯನಾ ಶಾಪಶಿಖಿಯಿಂದೆ, ನಿನ್ನಯ್ಯ ನಂ ಬಹುಕಾಲ ಬದುಕಿಸಿದೆನೀಂ; ಜತೆಯೊಳೇ ನನ್ನ ಕೊರಳ ಕರ್ಮಣಿಯ ಭಾಗ್ಯಮಂ ರಕ್ಷಿಸಿದೆ. ಚಿರಋಣಿಯು ಕಂದ ನಾಂ ನಿನಗೆ, ಬೇಕಾದುದಂ ಕೇಳು. ನನ್ನ ಶಕ್ತಿಯೊಳಿರ್ದುದಂ ನಾನೆ ಕೊಟ್ಟಪೆನು; ಮಿಕ್ಕುದಂ ಜನಕನಿಂಗೊರೆದು ಕೊಡಿಸಿದಪೆನಾಂ.

ಪೂರು:—[ಕ್ಷಣಕಾಲ ಯೋಚಿಸಿ] ದೇವಿ. ಮಹಾರಾಣಿ ನೀಂ. ಮಗನನಿಷ್ಟೊಂದು ಕರುಣೆಯಿಂ ಕಾಣುತಿಹೆಯಷ್ಟೆ. ನನಗಾಗಿ ನಾನೇನನುಂ ಬೇಡುತಿಲ್ಲ...ಬಡಜೀವಿಯೋರ್ವಳಿಹಳಲ್ತೆ? ಬಹುಕಾಲದಿಂ ನಿನ್ನ ಸೇವೆ ಯೊಳೆ ತನುವ ತೇದವಳು, ನಾನವಳ ಹೊಟ್ಟೆಯಿಂ ಹುಟ್ಟಿಯೇ ಜಗದ ಬೆಳಕಂ ಕಂಡಿಹುದು. ಮಹಾತಾಯಿ ನೀಂ, ದಯಗೈವೆಯೇಂ? ಕಾಲ್ಪಿಡಿದು ಬೇಡುತಿಹೆನಾಂ [ನಮಸ್ಕರಿಸುತ್ತಾ] ತಾಯೆ! ನನ್ನ ಹೆತ್ತವ್ವೆಯಾ ದಾಸ್ಯ ಮಯ ಬಂಧನವಹರಿಸು.

ದೇವಯಾನಿ:—ವತ್ಸ! ಹಾಗಾಗಲಿ ಕಂದಯ್ಯ! [ಪಶ್ಚಾತ್ತಾಪದಿಂದ ಶರ್ಮಿಷ್ಠೆಯ ಕಡೆ ಹೊರಳಿ] ಶರ್ಮಿಷ್ಠೆ!...ಮುನಿಯದಿರುನೀಂ ನನಗೆ, ಬಗೆಬಗೆಯೊಳನುದಿನಂ, ನಿನ್ನಂ ಹಿಂಸಿಸಿದ ಪಾಪಿಣಿಯು ನಾಂ ನಿನ್ನ ಸೌಭಾಗ್ಯ ಜೀವನವನೇ ಸೂರೆಗೊಂಡಿರ್ಪ ಘಾತುಕಿಯು ನಾಂ. 'ಧರ್ಮ' ದಿಂ...ನೀಂ...ಮಹಾರಾಜನೊಲ್ಮೆಯಂ ಪಡೆದಿರಲ್ ಮತ್ಸರಿಸಿ ಇನಿತೆಲ್ಲಮಂ ಗೈದು, ನಿನ್ನಣುಗನಂ, ಪುಣ್ಯ ಫಲದಾಮೂರ್ತಿಯಂ, ಎಳವೆಯೊಳೆ ಮುಪ್ಪಿನಾ ಸಂಕಟಕೆ ದೂಡಿರ್ಪಘಾತಕಿನಿಯು ನಾಂ...ಅಪರಾಧವೊಂದನುಂ ಲೆಕ್ಕಿಸದೆ, ಓ ಶರ್ಮಿಷ್ಠೆ! ಕ್ಷಮಿಸುತೆನ್ನಂ ಮನ್ನಿಪುದು ನೀಂ.

ಶರ್ಮಿಷ್ಠೆ:—ದೇವಯಾನೆ! ಕಳೆದುದಂ ನೆನೆನೆನೆದು ಕೊರಗದಿರು ನೀಂ. ನೇಪಥ್ಯದೊಳಗಿರ್ದು, ತನ್ನಿಚ್ಛೆಯೊಳ್ ನಮ್ಮ ಕರ್ಮಸೂತ್ರವ ಜಗ್ಗಿ 'ವಿಧಿ' ತಾನೆ ನಮ್ಮಂ ಕುಣಿಸುತಿರೆ, ನಾವೇನ ಗೈದಿಹೆವು, ಮತ್ತೇನ ಗೈಯ್ಯುತಿಹೆವು? ದುಮ್ಮಾನಮಂ ಬಿಟ್ಟು ಕಳೆ. ಗುರುಪುತ್ರಿ ನೀಂ ನನಗನುದಿನಂ ವಂದ್ಯಳಲ್ತೆ.

ದೇವಯಾನೆ:—ಶರ್ಮಿಷ್ಠೆ! ಮಹಾರಾಜನೊಲ್ಮೆಯಾ ಮಳೆಗೆ ಕಡಲು ನಾಂ, ಭೂಮಿ ನೀಂ. ನೀನೆನಗೆ ದಾಸಿಯಲ್ಲಂ, ಜೀವನದಿ'ತಂಗೆ' ಮುಂದೆ. ಅತಿ ಬಾಲ್ಯದಾ ನಮ್ಮ ದಿನಗಳಂ ನೆನೆ, ಮರೆದು ಕಳೆಯೆಲ್ಲವಂ ಅಂದಿನಾ ಕೆಳೆತನಮೆ ಮತ್ತೊರ್ಮೆ ಮೂಡಿತೆನೆ. ಮುಂದೆಮಗೆ ಎಂದೆಂದಿಗುಂ...ಒಂದೆ ಮತ, ಪಥ, ಗತಿಗಳೊಂದಾಗಿ ಹೊಂದಿಹುದು... ನಮ್ಮ ಬಾಳಿನ ವಿಷಮ ವಿಷಮಯ ಕಾಲ ಕಳೆದಿಹುದು; ಮತ್ತಿದೋ ಪುಣ್ಯಮಯದಮೃತಕಾಲಂ ಮೂಡಿಹುದು...ಸುಗಮ ಜೀವನ ಸುಖದ 'ಪೀಯೂಷ' ಕಳಶಮಂ ಪಿಡಿದೆತ್ತಿ ನಿನ್ನ ಮಗನೀ ಪೂರು ಕುಮಾರಂ ನಿಂದಿಹನು; ಮನದಣಿಯುುತುಂಬಂತೆ ಬಡಿಸುತಿಹನು. ಬಾ! ಯೆನ್ನ ಸೋದರಿಯೆ! ಬಾ! ಒಂದೆ ಬಟ್ಟಲೊಳಿಟ್ಟು ಜತೆಯಾಗಿ ಸುರಿಸುರಿದು ಸವಿಯೋಣ ಬಾ! ಸೌಭಾಗ್ಯದಾಸಗ್ಗಮಂ ಸೇರೋಣ ಬಾ!! [ಶರ್ಮಿಷ್ಠೆ ಯನ್ನು ತನ್ನೆರಡು ಕೈಗಳಿಂದಲೂ ಅಪ್ಪಿಕೊಳ್ಳುವಳು. ಆಕೆಯೂ ಅಪ್ಪಿ ಕೊಳ್ಳುವಳು.]

ಪೂರು:— ಸಾರ್ಥಕವಾಯ್ತು ನನ್ನ ಜನ್ಮ. [ಇಬ್ಬರನ್ನೂ ವಂದಿಸು ವನು.]

[ದೇವಯಾನೆ ಮತ್ತು ಶರ್ಮಿಷ್ಠೆ ಇಬ್ಬರೂ ಜತೆಯಾಗಿ ಯಯಾತಿಗೆ ನಮಸ್ಕರಿಸುತ್ತಾರೆ. ಸಂತೋಷದಿಂದ ಇಬ್ಬರನ್ನೂ ಅಪ್ಪಿಕೊಂಡು,]

ಯಯಾತಿ:—ಮಗನೇ! ಭೂಮಿಯೊಳೆ ಸ್ವರ್ಗಮಂ ಕೈವರ್ತಿಸಿದೆ ನೀಂ. [ಮಗನನ್ನು ಆಲಂಗಿಸಿಕೊಂಡು ಆತನ ಮೈದಡವುತ್ತಾ] ನಿನ್ನ ನ್ನರಾ...ಪುತ್ರರಂ...ಪಡೆದವರೆ...ಧನ್ಯರೀಧಾತ್ರಿಯೊಳ್ [ಮಗನ ದೇಹ ಸ್ಪರ್ಶದಿಂದ ಸಂಕಟವು ಸ್ವಲ್ಪ ಸ್ವಲ್ಪ ದೂರವಾಗುತ್ತದೆ.] ಮದನಂಗೆ ಮನಸೋತು...ಮನೆತುಂಬ...ಮಕ್ಕಳಂ ಪಡೆದರೇನುಂಟು?......ಧರ್ಮ ಪುತ್ರಂ......ನೀನೊರ್ವನೇ......ಸಾಕೆಮಗೆ ಕಂದ!......ದೇವಯಾನೆ!

ಪರಂಪರೆಯ ಕ್ರಮದಿಂದೆ,......ಹಿರಿಯ ಮಗನೇ......ಪಟ್ಟಬಾಧ್ಯಂ... ಆದೊಡೇಂ? "ತ್ಯಾಗಮಯ ಜೀವನಮೆ......ಸಾಮ್ರಾಜ್ಯಮಂ......ಪಾಲಿಪುದು...ತ್ಯಾಗಮೇ ಸೌಭಾಗ್ಯಮಂ...ಹೊಂದಿಪುದು......ತ್ಯಾಗದಿದಿರಿನೊಳ್...ವಿಶ್ವವೇ...ಶರಣಾಗಿ ಬಂದಪುದು...ತ್ಯಾಗಮೊಂದೇ 'ಧರ್ಮ'ದೊಳ್...ಜೀವನದ...ಚರಮಸಿದ್ಧಿ"...ಪ್ರಿಯತಮೆ! ... ನೋಡಿದೋ... ನಮ್ಮ ಕಂದನಂ...ತ್ಯಾಗದೊಳ್......ಜಗವನೇ......ಮೀರಿನಿಂದಿಹನು. ನಾನೆನ್ನ ಸಾಮ್ರಾಜ್ಯಪಟ್ಟಮಂ......'ಪುರುಕುಮಾರ'ಂಗೆ ಮೇಣವನ ಸಂತತಿಗೆ...'ಧರ್ಮ' ಶಾಶ್ವತಮಾಗಿ ಕೊಟ್ಟಪೆನು...ಶರ್ಮಿಷ್ಠೆ!...... 'ಧರ್ಮ'ಮಂ ಪಾಲಿಸಲ್...'ದಾಸಿ'ಯಾಗುತೆ ಬಂದೆ.......'ಧರ್ಮ'ಮಂ ಪಾಲಿಸುತೆ ಮಗನನೀಂ ಪಡೆದೆ...ನಿನ್ನೊಡಲ ಕುವರತಾಂ...ಮತ್ತದೇ 'ಧರ್ಮ'ಮಂ ಪಾಲಿಸುತೆ,...ಶಾಪದಾ..ನನ್ನ ಮುಪ್ಪಂ ಕೊಂಡು.. ನಿನ್ನ ದಾಸ್ಯವಹರಿಸಿ........'ಧರ್ಮ'ದಾ ಸಾಮ್ರಾಜ್ಯಪಟ್ಟಮಂ........ಪಡೆದಿರ್ಪಸಲ್ತೆ. ಪ್ರಿಯೆ!..... ..'ಧರ್ಮ'ಮಂ ರಕ್ಷಿಸಿದೆ....ನೀಂ, ನಿನ್ನನಾ.... 'ಧರ್ಮ'ಮೇ ರಕ್ಷಿಸಿತು,........'ಧರ್ಮದಾ ನಿಜದಾಸಿ' ನೀಂ, 'ಧರ್ಮ' ರಾಜ್ಯದ ತಾಯಿ ನಿಜವು;........ಕುಮಾರಾ! ನನ್ನ ಕಂದಯ್ಯ!! ಪಿತನ ಮನದಿಚ್ಛೆಯಂ ಸಲ್ಲಿಸಲ್ ನೀನುಮಂತೆಯೆ ನಿನ್ನನ್ವಯಮುಂ ಗೈದಿರ್ದ ಸಾಹಸದ ಹಿರಿಮೆಯಾ "ಧರ್ಮ"ಮಂ........ಹಾಡಿ ನಲಿಯಲಿ ಜನಂ,... ಮೇಣ್ ಕೇಳಿ ಕಲಿಯಲಿ ಜನಪದಂ ನಿಚ್ಚಮಾ........[ಅಷ್ಟರಲ್ಲಿ ಪೂರುವು ನಿಶ್ಶಕ್ತನಾಗುವನು, ಯಯಾತಿ ಪೂರ್ಣ ಶಕ್ತಿಯಿಂದ ಕೂಡುವನು. ಪೂರುವನ್ನು ಶರ್ಮಿಷ್ಠೆ, ದೇವಯಾನಿಯರು ಕೈಯ್ಯಿಂದ ಹಿಡಿಮುಕೊಳ್ಳುವರು. ಯಯಾತಿಯು ನಿಟ್ಟುಸಿರೊಂದನ್ನು ಬಿಟ್ಟು, ಕೈಮುಗಿದು ಪ್ರಾರ್ಥಿಸುತ್ತಾನೆ:]

"ಅಸತೋ ಮಾ ಸದ್ಗಮಯ,
ತಮಸೋ ಮಾ ಜ್ಯೋತಿರ್ ಗಮಯ,
ಮೃತ್ಯೋರ್ ಮಾ ಅಮೃತತ್ವಂ ಗಮಯ,
ಓಂ ಶಾಂತಿಃ, ಶಾಂತಿಃ, ಶಾಂತಿಃ."

[ನಿಧಾನವಾಗಿ ಪರದೆ ಬೀಳುವುದು.]

ಮಂಗಲಂ

ಈ ಲೇಖಕನ ಕೃತಿಗಳು:

1. ಭೀಷ್ಮಾರ್ಜುನ. (ಯಕ್ಷಗಾನ ಅರ್ಥ ವಿವರಣೆ.)
2. ಪ್ರಿಯದರ್ಶನಂ. (ಪದ್ಯ ಗಂಧಿ ಗದ್ಯ ಕಾವ್ಯ.)

"ಧರ್ಮ"—"ದಾಸಿ"

"ತ್ಯಾಗಮಯ ಜೀವನವೆ
ಧರ್ಮದೊಳ್ ಚರಮುಸಿದ್ಧಿ"
"'ಧರ್ಮ'ದಾ ನಿಜ 'ದಾಸಿ'
ಧರ್ಮ ರಾಜ್ಯದ ತಾಯಿ ನಿಜವು."

ಪ್ರತಿಗಳು ಈ ಕೆಳಗಿನವರಲ್ಲಿ ಸಿಗುತ್ತವೆ.

1. ಲೇಖಕ
2. ಭಾಗವತ ಎ. ಗಣಪಯ್ಯ, ಚೊಕ್ಕಾಡಿ, ದ. ಕ.
3. ಪೊಪ್ಯುಲರ್ ನ್ಯೂಸ್ ಏಜನ್ಸಿ, ಪುತ್ತೂರು, ದ. ಕ.
4. ಬಿ. ಯಸ್. ಜೋಶಿ, ಬೆಳ್ಳಾರೆ, ದ. ಕ.

ಉದಯ ಪ್ರಿಂಟರ್ಸ್ ಎಂಡ್ ಪಬ್ಲಿಕೇಷನ್ಸ್ ಲಿಮಿಟೆಡ್, ಮಂಗಳೂರು-3